ಅಚಲ

ಬಿಡಿಪ್ರತಿ : 4 ರೂ.

ತಿಂಗಳ ಪತ್ರಿಕೆ

ಡಿಸೆಂಬರ್ - 2006

ಒಳಗೇನಿದೆ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,

ಬೆಂಗಳೂರು

ಅಚಲ

ಸಂಪುಟ - 21 ಸಂಚಿಕೆ : 12

ಸಂಪಾದಕ ಮಂಡಳಿ

ಎನ್. ಗಾಯತ್ರಿ
ನೇಮಿಚಂದ್ರ, ದೇವಿ,
ಶಾಂತಾ ನಾಗರಾಜ್
ಹೆಚ್. ಎನ್. ಗೀತಾ
ಹೇಮಲತಾ ಮಹಿಷಿ

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ
ಕೇಂದ್ರ,
ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯ ಓದುಗರಿಗೆ,
ಹೊಸವರ್ಷದ ಶುಭಾಶಯಗಳು

"ನೂರಾಸೆಯ ಹೆಗಲೇರಿಸಿ
ನಡೆದ ದಾರಿ ನಿನ್ನದೆ
ಬರುವ ದಿನದ ಭರವಸೆಗಳ
ಬೆಳವ ಹೊಣೆಯು ನಿನ್ನದೆ ! "

– ಜಿ. ಎಸ್. ಎಸ್.

ಅಚಲ ವಿಳಾಸ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಬೇಲಿಯೇ ಎದ್ದು ಹೊಲ ಮೇಯ್ದರೆ ?

ಬೆಂಗಳೂರಿನ ಜಾಲಹಳ್ಳಿಯ ಕ್ಲಾರೆಟ್ ಶಾಲೆಯ ಮುಖ್ಯೋಪಾಧ್ಯಾಯ ಪಾದ್ರಿ ಮ್ಯಾಥ್ಯೂ ಆ ಶಾಲೆಯ ಹೆಣ್ಣು ಮಕ್ಕಳೊಂದಿಗೆ ಅನುಚಿತವಾಗಿ ವರ್ತಿಸುತ್ತಾ ಲೈಂಗಿಕ ಕಿರುಕುಳ ನೀಡುತ್ತಿದ್ದ ಘಟನೆ ಬಹಿರಂಗಗೊಂಡಿದ್ದು ಸಾರ್ವಜನಿಕ ಪ್ರತಿಭಟನೆಗೆ ಕಾರಣವಾದದ್ದು ಈಗ ಮಾಧ್ಯಮಗಳಲ್ಲಿ ಬಿತ್ತರಗೊಂಡಿದೆ. ಆಯ್ದ ಹೆಣ್ಣು ಮಕ್ಕಳನ್ನು ತನ್ನ ಕಛೇರಿಗೆ ಕರೆಸಿಕೊಂಡು ಅನುಚಿತವಾಗಿ ವರ್ತಿಸುತ್ತಿದ್ದ ಈ ಪಾದ್ರಿ ಮಹಾಶಯ ಆ ಹೆಣ್ಣು ಮಕ್ಕಳಲ್ಲಿ ಭಯ, ಜಿಗುಪ್ಸೆ ಉಂಟಾಗುವಂತೆ ಮಾಡಿ ಅವರ ಸುಂದರ ಬಾಲ್ಯಕ್ಕೆ ಕೊಡಲಿ ಪೆಟ್ಟು ಹಾಕುತ್ತಿದ್ದ. ಹದಿನೈದು ದಿನಗಳ ಕಾಲ ಹಿಮಾಲಯದ ಟ್ರೆಕ್ಕಿಂಗ್‌ಗೆ ಹೋಗಿದ್ದಾಗಲೂ ಹೆಣ್ಣುಮಕ್ಕಳಿಗೆ ಚಿತ್ರ ವಿಚಿತ್ರವಾಗಿ ಕಿರುಕುಳ ಕೊಟ್ಟಿದ್ದು ಆ ಮಕ್ಕಳ ಮನಸ್ಸಿನ ಮೇಲೆ ಆಘಾತವುಂಟು ಮಾಡಿದೆ. ತಮ್ಮ ಮಕ್ಕಳ ವರ್ತನೆ ಮತ್ತು ಮಾನಸಿಕ ಆರೋಗ್ಯ ಸರಿಯಿಲ್ಲದ್ದನ್ನು ಗುರುತಿಸಿದ ಪೋಷಕರೂ ಕೂಡ ಗಾಭರಿಯಾಗಿ ಚಿಂತಾಕ್ರಾಂತರಾಗಿದ್ದಾರೆ. ಆದ್ದರಿಂದಲೇ ವಿಷಯ ಬಹಿರಂಗಗೊಂಡ ನಂತರ ನೂರಾರು ಸಂಖ್ಯೆಯಲ್ಲಿ ಪೋಷಕರು ಶಾಲೆಯನ್ನು ಮುತ್ತಿಗೆ ಹಾಕಿದ್ದಲ್ಲದೆ, ರಸ್ತೆ ತಡೆ ಮುಂತಾದ ಉಗ್ರ ಪ್ರತಿಭಟನೆಯನ್ನು ನಡೆಸಿದ್ದಾರೆ. ತಪ್ಪು ಮಾಡಿರುವ ಫಾದರ್ ಕಳ್ಳತನದಿಂದ ಶಾಲೆ ಬಿಟ್ಟು ಓಡಿಹೋಗಿರುವುದೇ ಅವನು ಅಪರಾಧ ಮಾಡಿರುವನೆಂಬುದಕ್ಕೆ ಸಾಕ್ಷಿಯಾಗಿದೆ. ಸಾರ್ವಜನಿಕರ ತೀವ್ರ ಪ್ರತಿಭಟನೆಯ ನಂತರ ಫಾದರ್ ವಕೀಲನೊಂದಿಗೆ ಬಂದು ಪೋಲೀಸ್ ಠಾಣೆಗೆ ಬಂದು ಹಾಜರಾಗಿರುವುದು ಇತ್ತೀಚಿನ ಸುದ್ದಿ.

ಈ ಇಡೀ ಪ್ರಕರಣ ನಾಗರೀಕ ಸಮಾಜಕ್ಕೆ ಅತ್ಯಂತ ಅವಮಾನಕರವಾದ ಸಂಗತಿಯಾಗಿದೆ. ವಿದ್ಯೆ ಕಲಿಸಬೇಕಾದ ಶಿಕ್ಷಕರು, ಧರ್ಮ ಬೋಧನೆಯ ಧರ್ಮಗುರುಗಳು ಹೆಣ್ಣಿನ ಅಪಮಾನ ಮಾಡುವುದು, ಚಿಕ್ಕ ಮಕ್ಕಳ ಮೇಲೆ ದೌರ್ಜನ್ಯವೆಸಗುವುದು ಬೇಲಿಯೇ ಎದ್ದು ಹೊಲ ಮೇಯ್ದ ಘಟನೆಯಾಗುತ್ತದೆ. ಹಾಗೆಯೇ ಇದೇನು ಅಪರೂಪದ ಹೊಸ ಸಂಗತಿಯೂ ಅಲ್ಲ. ಕಳೆದ ಒಂದೆರಡು ವರ್ಷಗಳಲ್ಲಿ ನಮ್ಮ ನಾಡಿನಲ್ಲಿಯೇ ಗ್ರಾಮಾಂತರ ಪ್ರದೇಶದ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರಿಗೆ ಕಿರುಕುಳ ಕೊಡುತ್ತಿದ್ದ ಶಿಕ್ಷಕರುಗಳ ಲಂಪಟತನ ಬಯಲಿಗೆ ಬಂದಿದ್ದು ಸಾರ್ವಜನಿಕರ, ಪೋಷಕರ ಪ್ರತಿಭಟನೆಗೆ, ರೋಷಕ್ಕೆ ಗುರಿಯಾಗಿರುವ ಹಲವಾರು ಪ್ರಸಂಗಗಳು ನಮ್ಮ ಮುಂದಿವೆ. ಮಹಿಳಾ ಶಿಕ್ಷಣವೆನ್ನುವುದು ಅತ್ಯಂತ ದುಬಾರಿಯ ಸಂಗತಿಯಾಗಿರುವಾಗ ಗ್ರಾಮೀಣ ಪ್ರದೇಶಗಳಲ್ಲಂತೂ ಶಿಕ್ಷಕರ ಇಂತಹ ವರ್ತನೆ ಹೆಣ್ಣಿನ ಪಾಲಿಗೆ ಹಿನ್ನಡೆಯ ಹೆಜ್ಜೆಯಾಗುತ್ತದೆ. ಅಷ್ಟೇ ಅಲ್ಲ ಸಮಾಜ ಮತ್ತು ಸರ್ಕಾರ ಮಕ್ಕಳಿಗೆ ಲೈಂಗಿಕ ಕಿರುಕುಳದ ಬಗ್ಗೆ ಹೆಚ್ಚಿನ ಅರಿವು ಮೂಡಿಸುವುದಲ್ಲದೆ ಅದನ್ನೊಂದು ದೊಡ್ಡ ಸಾಮಾಜಿಕ ಕಳಂಕ ಎಂಬ ಭಾವನೆಯು ಬರದಂತೆ ಜಾಗೃತಿಯನ್ನುಂಟು ಮಾಡಿದರೆ ಮಕ್ಕಳು ತಮ್ಮ ಅನುಭವವನ್ನು ದೊಡ್ಡವರೊಂದಿಗೆ ಹಂಚಿಕೊಂಡಾರು.

ದುಡಿಯುವ ಸ್ಥಳಗಳಲ್ಲಿ ನಡೆಯುವ ಲೈಂಗಿಕ ಹಗರಣಕ್ಕೆ ಸಂಬಂಧಪಟ್ಟಂತೆ ಇರುವ ಕಾನೂನಿನ ಸೌಲಭ್ಯಗಳನ್ನು ಶಾಲಾ ಕಾಲೇಜುಗಳಲ್ಲೂ ವಿಸ್ತರಿಸಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ದುಡಿಯುವ ಸ್ಥಳಗಳಲ್ಲಿ ಗೌರವಯುತ ದುಡಿಮೆಯ ವಾತಾವರಣವನ್ನು ನಿರ್ಮಿಸುವುದು ಮಾಲೀಕರ ಜವಾಬ್ದಾರಿ ಹೇಗೋ ಹಾಗೆ ಶಾಲಾ ಕಾಲೇಜುಗಳಲ್ಲಿ ಸೌಹಾರ್ದಯುತ, ಆರೋಗ್ಯಕರ ಮೌಲ್ಯಗಳ ಪರಿಸರವನ್ನು ನಿರ್ಮಿಸುವುದು ಆಡಳಿತ ಮಂಡಳಿಯ ಮತ್ತು ಮುಖ್ಯಸ್ಥರ ಜವಾಬ್ದಾರಿಯಾಗಬೇಕು. ಆದರೆ ಬೇಲಿಯೇ ಎದ್ದು ಹೊಲ ಮೇಯ್ದರೆ? ದೂರು ಸಲ್ಲಿಸುವುದು ಯಾರಿಗೆ ? ಕೇವಲ ಸೀನಿಯಾರಿಟಿ ಆಧಾರದ ಮೇಲೆ ಮುಖ್ಯಸ್ಥರನ್ನು ನೇಮಿಸಲಾಗದು. ವಿದ್ಯಾಭ್ಯಾಸವೆನ್ನುವುದು ಒಂದು ಮಾರುಕಟ್ಟೆಯ ವ್ಯವಹಾರವಾಗಿರುವ ಇಂದಿನ ದಿನಗಳಲ್ಲಿ ಈ ಮೌಲ್ಯಗಳು ದುಬಾರಿಯ ಸಂಗತಿಯಾಗಿದೆಯಾದರೂ, ಭವಿಷ್ಯದ ಪ್ರಜೆಗಳನ್ನು ನಿರ್ಮಿಸುವ ತಾಣಗಳು ಆರೋಗ್ಯವಾಗಿರಬೇಕೆಂದು ಬಯಸುವುದು ಪ್ರಜಾಪ್ರಭುತ್ವದ ಆಶಯವಾಗಿರುತ್ತದೆ. ಅದಕ್ಕಾಗಿ ನಿರಂತರ ಹೋರಾಟ ಅತ್ಯಗತ್ಯ.

- ಎನ್. ಗಾಯಿತ್ರಿ

ಬಕುಲದ ಹಾದಿಯಲ್ಲಿ

-ನೇಮಿಚಂದ್ರ

ಬಕುಲದ ದಾರಿ (ಕವಿತೆಗಳು)
ಎಲ್. ಸಿ. ಸುಮಿತ್ರಾ
ಅಕ್ಷರ ಪ್ರಕಾಶನ
ಹೆಗ್ಗೋಡು, ಸಾಗರ
ಪುಟಗಳು : 72 ಬೆಲೆ 45/-

ತರಗೆಲೆಗಳ ನಡುವೆ
ಬಕುಲದ ಹೂಗಳ ರಂಗೋಲಿ
ಚುಕ್ಕಿಗಳ ಹಂಗಿಲ್ಲ'

'ಬಕುಲದ ದಾರಿ' - ಬಾಲ್ಯದ ಆ ಹಾದಿಗೆ ಕರೆದೊಯ್ಯಿತು. ಆತುರವಿಲ್ಲದೆ ಪುರುಸೊತ್ತಿನ ಬೆಳಗು, ಮಧ್ಯಾಹ್ನ, ಸಂಜೆಗಳ ನೆನಪಿನ ಗಲ್ಲಿಗೆ. ರಸ್ತೆಯ ಎರಡೂ ಬದಿಗೆ ಮರಗಳು, ಹಾದಿಯ ತುಂಬ ಸುರಿದ ಬಿಳಿಯ ನಕ್ಷತ್ರದ ಹೂಗಳು. 'ಬಕುಳದ ದಾರಿ' ನಮ್ಮ ನೆನೆಪಿನಂಗಳದಲ್ಲಿ ನೂರು ಚಿತ್ತಾರವನ್ನು ಬಿಡಿಸುತ್ತಾ, ಹಚ್ಚ ಹಸಿರಿನ ನಿರಾತುರ ಬದುಕಿನ ಚಿತ್ರಗಳಿಗೆ ಕಣ್ತೆರೆವ ಕವನ ಸಂಕಲನ.

ಮಲೆನಾಡ ಪ್ರಕೃತಿಯ ಮಡಿಲಲ್ಲಿ ಅರಳಿದ ಕವಿತೆಗಳಿವು. ಬೆಂಘಳೂರಿನ ಉಸಿರು ಬಿಗಿ ಹಿಡಿದು ಓಡುವ ವೇಗದ ಟ್ರಾಫಿಕ್ ನಡುವೆ, ಬಹುಮಹಡಿ ಕಟ್ಟಡಗಳ ನೆಲಬಿಟ್ಟ ಎತ್ತರದಲ್ಲಿ ಕುಳಿತು ಓದುವಾಗ - ಈ ಕವನಗಳಲ್ಲಿ ಅರೆ ಕ್ಷಣ, ಘಮ್ಮನೆ 'ಬಕುಳದ ಗಂಧ'ವನ್ನು, 'ಆಲೆಮನೆಯ ಬೆಲ್ಲದ ಕಂಪ'ನ್ನು 'ಮುಂಗಾರ ಮಣ್ಣವಾಸನೆ' ಯನ್ನು ಆಘ್ರಾಣಿಸಲು ಸಾಧ್ಯವಾಗುತ್ತದೆ.

'ಹಂಚಿಕಡ್ಡಿ ಬಾಳೆ ನಾರು ಪುಟಾಣಿ ಬೆರಳು'ಗಳಲ್ಲಿ ಬಕುಲದ ಗಂಧವನ್ನು ನಿರಂತರ ಹಿಡಿಯಬಲ್ಲ ಕೆಲವು ಸುಂದರ ಕವನಗಳು ಇಲ್ಲಿವೆ.

'ಬಿದಿರು ಹೂ ಬಿಟ್ಟಾಗ' ಒಂದು ಕವನ. ಬಿದಿರು ಹೂ ಬಿಡುವುದೆ? ಹೌದು, 'ಕೆಲವು ಜಾತಿಯ ಬಿದಿರು ಮೂವತ್ತಕ್ಕೆ, ಕೆಲವು ನಲವತ್ತಕ್ಕೆ ಹೂ ಬಿಟ್ಟು ಸಾಯುತ್ತವೆ. ಕೆಲವು ಶತಮಾನ ಕಳೆಯುತ್ತವೆ'. 'ಈ ಕಾಡಿನ ಮರಗಳ' ಪರಿ ಅಚ್ಚರಿ ಮೂಡಿಸುತ್ತದೆ. 'ಬಿದಿರ ಮೆಳೆಯಲ್ಲಿ ಒಮ್ಮೆ ಕೊಳಲ ದನಿ' ಕೇಳಲು ಕವಿಯ ಮನ ತುಡಿದಿದೆ. ಆದರೆ ಅದಕ್ಕಿಂತ ಹೆಚ್ಚಿನ ವಿಸ್ಮಯ' 'ಬೆಂಕಿಯಿಟ್ಟರು ಚಿಗುರೊಡೆವ' ಬಿದಿರಿನ ಗರಿ.

'ಇಲ್ಲಿ ಹೆಚ್ಚಾಯಿತೆಂದು ಬೇಸಿಗೆಯ ಕೊನೆಯಲ್ಲಿ
ಬೆಂಕಿಯಿಟ್ಟರು ಬಿದಿರಿಗೆ
ಮುಂಗಾರಿಗೆ ಬಿದಿರಕ್ಕಿ ಮೊಳೆತು ಸಸಿಯಾಗಿ
ತೋಟದ ಬೇಲಿ ಕಾವಲಿಗೆ ಸಾಲು ಸಾಲು' ಇಲ್ಲಿ ಯಾವುದೂ ಸತ್ತು ಮುಗಿಯುವುದಿಲ್ಲ. ಮತ್ತೆ ಮತ್ತೆ ಮೇಲೆದ್ದು ನಿಲ್ಲುವ 'ನಿತ್ಯ ಹರಿದ್ವರ್ಣ' ಬದುಕು.

ಹಾಗೆಂದು ಇಲ್ಲಿ ಎಲ್ಲವೂ ಸುಂದರವೆಂದಲ್ಲ.

'ತಲೆಯಿಲ್ಲದ ಜೀರುಂಡೆ ಮಿಡತೆಯ ಬಾಯಲ್ಲಿ, ಕೈ ಮುಗಿದೇ ತಲೆ ತಿನ್ನುವ ಈ ಪರಿ' ಪುರಾತನವಾದರೂ ನಿತ್ಯನೂತನವಾದ ಕ್ರೌರ್ಯವಿದೆ. ದಿಟವೆಂಬಂತೆ ಕಾಣುವ ಬಣ್ಣದ ಬದುಕಲ್ಲಿ, 'ಕೃತಕ ಹೂಗಿಡದಂತೆ ಕಾಣುವ ನಿಜದ ತೋಟ'ದ ವಿಪರ್ಯಾಸವಿದೆ.

ಈ ಕವನಗಳಲ್ಲಿ 'ಹೊತ್ತೇರಿದಂತೆ ಬಣ್ಣ ಬದಲಾಯಿಸುವ ಬೆಟ್ಟತಾವರೆ'ಯಿದೆ. 'ಮುಂಜಾವು ನಗುವ ಸಂಜೆ ಮುಗಿಯುವ ಕೋಳಿ ಹೂ'ಗಳಿವೆ. 'ಎಲ್ಲರೊಳಗಿದ್ದೂ ಎಲ್ಲೂ ಕಾಣದ ಅವಳ ಹುಡುಕಾಟ'ವಿದೆ. 'ಚಿಗುರಿದಂತೆಲ್ಲ ಚಿವುಟ'ದವರಿದ್ದಾರೆ.

'ಊರ ಮನೆಯವರ ಕಷ್ಟಾಕ್ದ', 'ನೂರಾರು ಕತೆಗಳ ಕಣಜ' ವಾಗಿ 'ರೇಜಿಗೆಯೊಳಗೇ ಕಾಲ ಮುಗಿಸಿದ', 'ಕಾಲದ ಕರೆಗೆ ಊರಿಗೆ ಮುಂಚೆ ಓಗೊಟ್ಟ' ಅಜ್ಜಿಯ ನೆನಪಿದೆ. 'ಸುರಿಯುವ ಮಳೆಯಲ್ಲಿ ಮುಖವೇ ಕಾಣದ ಕೊಡೆ'ಗಳಿವೆ, 'ನಡೆಯದೇ ಬಿಟ್ಟ ದಾರಿಗಳಿವೆ'.

ಇವುಗಳ ನಡುವೆಯೇ, ಇದ್ದೂ ಇಲ್ಲದಂತೆ ಕಣ್ಮರೆಯಾದ ಹೆಣ್ಣುಗಳಿದ್ದಾರೆ -
ಇದ್ದಳು ಎಂದೇ ತಿಳಿದಿರಲಿಲ್ಲ
ಈಗಿಲ್ಲ
ನೆನಪಿನ ನೆಲದ ಮೇಲೆ
ಮರೆವಿನ ಹುಲ್ಲು, ಕಳೆ ಬೆಳೆದು
ಮುಚ್ಚಿ ಹೋಯಿತು ಎಲ್ಲ'- ಮರೆತ ಬದುಕುಗಳಿವೆ.

'ನಗು ನಿಟ್ಟುಸಿರಾಗಿ, ಜೀವಗಳು ನಲುಗುವ ಪರಿ
ಸುದ್ದಿಯಾಗುವುದಿಲ್ಲ ಈ ರೂಪಾಂತರ'- ವಿವಾಹ ಹೆಣ್ಣನ್ನು ಸದ್ದಿಲ್ಲದೆ, ರೂಪಾಂತರಿಸುವ ರೀತಿಗೆ ವಿಷಾದವಿದೆ.

ಈ ಸಂಕಲನದಲ್ಲಿರುವ ಒಂದು ಕುತೂಹಲದ ಕವನ 'ಪುಸ್ತಕದ ಬೀರುವಿನಲ್ಲಿ ಕ್ರಾಂತಿ'-
'ಇದ್ದವರು ಶೇಕಡ ತೊಂಬತ್ತು ಹುಡುಗಿಯರು
ಹೇಳಿಕೊಳ್ಳಲು ನಮ್ಮದು ಸಹಶಿಕ್ಷಣ
ಮಗನ ಮಾರ್ಕ್ಸ್ ಕಾರ್ಡ್‌ಗೆ ಅಪ್ಪನೇ ಸಹಿ ಹಾಕಬೇಕು'
ಎಂಬ ಸಾಲುಗಳು ಮುಂದುವರೆದು -

'ನಮ್ಮ ಪುಸ್ತಕದ ಬೀರು ಹೀಗೇ
ಮೇಲಿನ ಸಾಲಿನಲಿ 'ಬೆಟ್ಟದ ಜೀವ' ಮರಳಿ ಮಣ್ಣಿಗೆ
ಹುಚ್ಚು ಮನಸಿನ ಹತ್ತು ಮುಖಗಳು ನೆನಪಿನ ದೋಣಿಯಲಿ ತೇಲಿ
ಹುಳಿಮಾವಿನ ಮರಗಳು ಪರಿಸರದ ಕಥೆಗಳಾಗಿ
ನಿಗೂಢ ಮನುಷ್ಯರ ಚಿದಂಬರ ರಹಸ್ಯಗಳು ಬಿಡಿಸಲಾಗದೆ
ಮುಸ್ಸಂಜೆಯ ಕಥಾಪ್ರಸಂಗಗಳಾಗಿವೆ

ಕೆಳಕೆಳಗಿನ ಹಂತಗಳಲ್ಲಿ ನೋಡಿ
'ಅಂತರಂಗದ ಪುಟಗಳಲ್ಲಿ' 'ಸ್ತ್ರೀ ಪುರುಷರು'
'ಕಡಲ ಹಾದಿಯಲಿ' ಬಾಲ್ಯದ ನೆನಪು ಕಮಲಾಗೆ
'ಇದು ಬೇರೊಂದು ದಾರಿ' ಕವಡೆಯಾಟದ ಪುರುಷಾಕಾರಕ್ಕೆ
ಊರು ಕೇರಿ, ಗೌರ್ಮೆಂಟ್ ಬ್ರಾಹ್ಮಣ, ಕುಣಿಯೇ ಘುಮಾ
ಟಿಪ್ಪಣಿಸುತ್ತಿದ್ದ ಸಮಾಜಶಾಸ್ತ್ರಜ್ಞೆಗೆ ಸಿಟ್ಟು ಬಂದು
ಎಲ್ಲ ತಲೆಕೆಳಗು ಮಾಡಿ ಕೆಳಗಿದ್ದವರು ಮೇಲೆ ಹೋಗಿ
ಅಲ್ಲಿನವರು ಇಲ್ಲಿಗೆ ಬಂದು
ಪುಸ್ತಕದ ಬೀರುವಿನಲ್ಲಿ ಕ್ರಾಂತಿಯಾಯಿತು.

'ಬಕುಲದ ದಾರಿ' - ಎಲ್.ಸಿ. ಸುಮಿತ್ರಾ ಅವರ ಪ್ರಥಮ ಕವನ ಸಂಕಲನ.

ಶಕುಂತಲೆಯ ಉತ್ತರ

ಕವಿಯಿತ್ರಿಯಾಗಿ, ಕತೆಗಾರ್ತಿಯಾಗಿ, ಕಾದಂಬರಿಗಾರ್ತಿಯಾಗಿ ಈಗಾಗಲೇ ಕನ್ನಡ ಸಾಹಿತ್ಯ ಲೋಕಕ್ಕೆ ಹಲವಾರು ಉತ್ತಮ ಗ್ರಂಥಗಳನ್ನು ನೀಡಿರುವ ಎಂ.ಎಸ್. ವೇದಾರವರ ಮೊದಲ ನಾಟಕ 'ಉತ್ತರ ಶಾಕುಂತಲ '. ಈಗಾಗಲೇ ನಮ್ಮಲ್ಲಿ ಪ್ರಚಲಿತವಿರುವ ಮತ್ತು ಚರ್ಚಿತವಾಗಿರುವ ಶಾಕುಂತಲೆಯ ವಸ್ತುವನ್ನು ಮರು ಓದಿಗೆ ಒಳಗುಮಾಡಿ ಸ್ತ್ರೀವಾದಿ ತಾತ್ವಿಕ ನಿಲುವಿನ ಹಿನ್ನೆಲೆಯಲ್ಲಿ ಹೊಸ ಶಾಕುಂತಲೆಯನ್ನು ನಮಗೆ ಪರಿಚಯಿಸುವ ಪ್ರಯತ್ನ ಈ ನಾಟಕದಲ್ಲಿದೆ.

ಪುರಾಣೇತಿಹಾಸಗಳಲ್ಲಿ ಮತ್ತು ನಮ್ಮ ಸಾಹಿತ್ಯ ಪರಂಪರೆಯಲ್ಲಿ ಪ್ರೇಮದ ಕಥೆಗೆ, ಶಾಪದ ಕತೆಗೆ ಮತ್ತು ವಿಸ್ಮೃತಿಯ ಕತೆಗೆ ವಸ್ತುವಾಗಿದ್ದ ಶಾಕುಂತಲೆ, ಈ ನಾಟಕದಲ್ಲಿ ಆತ್ಮಾಭಿಮಾನ, ಧೈರ್ಯ ಹಾಗೂ ಧೀಮಂತಿಕೆಯ ಪ್ರತಿರೂಪವಾಗಿ ಪಿತೃಪ್ರಾಧಾನ್ಯತೆ ಮತ್ತು ನಿರಂಕುಶ ರಾಜತ್ವದ ಲೋಲುಪತೆಗಳನ್ನು ಪ್ರಶ್ನಿಸುವ, ಧಿಕ್ಕರಿಸುವ ಅಸಾಮಾನ್ಯ ಸ್ತ್ರೀ ಪಾತ್ರವಾಗಿ ಹೊಸ ಸ್ತ್ರೀ ಪರಂಪರೆಯನ್ನು ಕಟ್ಟಿಕೊಡುತ್ತಾಳೆ. ಮೂಲನಾಟಕಗಳಲ್ಲಿ ಕಂಡು ಬರದ ಹೊಸ ಸ್ತ್ರೀ ಪಾತ್ರಗಳು ಈ ಕೃತಿಯಲ್ಲಿ ಚಿತ್ರಿತವಾಗಿ ನಾಟಕದ ಚೌಕಟ್ಟನ್ನು ವಿಸ್ತರಿಸಿದೆ. ವೇದಾ ಅವರ ಸೃಜನಶೀಲ ಕಲ್ಪನೆ ಅದ್ಭುತವಾದದ್ದು. ಆದ್ದರಿಂದಲೇ ನಮ್ಮ ಸಾಂಪ್ರದಾಯಿಕ ಶಾಕುಂತಲೆಯ ಪಾತ್ರ ವಿಸ್ತೃತಗೊಂಡು ನೋವುಂಡ ಶಾಕುಂತಲೆ ತನ್ನ ಸವತಿಯ, ಸೊಸೆಯರ, ತನ್ನ ಗೆಳತಿಯರ ಮಕ್ಕಳ - ಎಲ್ಲರ ನೋವಿನೊಂದಿಗೆ ಅನುಸಂಧಾನ ಮಾಡಬಲ್ಲ, ಒಟ್ಟು ಸ್ತ್ರೀ ಶೋಷಣೆಯ ಬಗ್ಗೆ ಒಂದು ವ್ಯಾಪಕ ವ್ಯಾಖ್ಯಾನ ನೀಡಬಲ್ಲ ಧೀಮಂತ ಪಾತ್ರವಾಗಿ ಮೂಡಿ ಬಂದಿದ್ದಾಳೆ. ದೂರ್ವಾಸನ ಶಾಪ, ಉಂಗುರ ಕಳವು, ದುಶ್ಯಂತನ ವಿಸ್ಮೃತಿ - ಈ ಯಾವ ಮೂಢನಂಬಿಕೆಗಳಿಗೂ ಆಸ್ಪದವಿರದಂತೆ ಪುರುಷ ಲೋಕದ ಡಾಂಭಿಕತೆಯನ್ನು ವೇದಾ ಬಿಚ್ಚಿಡುತ್ತಾರೆ. ಹಾಗೆಯೇ ಪುರುಷಲೋಕದ ಸಂವೇದನಾಶೀಲತೆಯೇ ಮೂರ್ತಿವೆತ್ತಂತಾದ ಕಣ್ವರ ಪಾತ್ರವನ್ನೂ ಅಷ್ಟೇ ಆಪ್ತವಾಗಿ ಈ ನಾಟಕದಲ್ಲಿ ತಂದಿದ್ದಾರೆ.

ಸಾಮಾನ್ಯವಾಗಿ ಪುರುಷ ಸೂತ್ರಧಾರನ ಕೈಯಲ್ಲಿ ನಿರ್ವಹಿಸಿಕೊಳ್ಳುವ ನಾಟಕದ ಪ್ರಸಂಗ, ಇಲ್ಲಿ ಸೂತ್ರಧಾರಿಣಿಯ ಮೂಲಕ ಬಿತ್ತರವಾಗುತ್ತಿರುವುದೇ ನಾಟಕದ ತಾತ್ವಿಕ ಚೌಕಟ್ಟನ್ನು ನಿರ್ಧರಿಸುತ್ತಿದೆ. ಮೊದಲ ಅಂಕದಲ್ಲೇ ನಾಟಕದ ಹಾದಿಯನ್ನು ಪರಿಚಯಿಸುವ ಸಾಲುಗಳನ್ನು ಗಮನಿಸಿ. ಅನಸೂಯ, ಪ್ರಿಯಂವದೆಯರ ಮಕ್ಕಳಾದ ಅಲಕಾ, ಮಾಲಿನಿಯರ ಹಾಡಿನೊಂದಿಗೆ ಕಥೆ ಆರಂಭವಾಗುತ್ತದೆ :

'' ಬನ್ನಿ ಹಕ್ಕಿಗಳೇ ಬನ್ನಿ ಚಿಟ್ಟೆಗಳೇ
ನಿಮ್ಮ ಗೆಳತಿಯರು ನಾವು
ಓಡಿ ಬಂದಿದ್ದೇವೆ ಸುತ್ತಮುತ್ತಲ
ಗೋಡೆಗಳ ಕುಟ್ಟಿ ಕುಟ್ಟಿ
ಪುಡಿ ಪುಡಿ ಮಾಡಿ
ನಿಮ್ಮಂತೆಯೆ ನಾವಾಗ ಬಯಸುತ್ತಾ
ಆಕಾಶವೇ ನಾವಾಗುವ ಕನಸ ಕಾಣುತ್ತಾ ''.

ಗತದ ಬದುಕಿನ ಕಥನದೊಂದಿಗೆ ವರ್ತಮಾನದ ಕತೆಯನ್ನು ಬೆಳೆಸುತ್ತಾ ಹೋಗುವ ಈ ನಾಟಕದ ತಂತ್ರ ವಿಶಿಷ್ಟವಾಗಿದೆ. ಶಾಕುಂತಲೆ ತನ್ನ ಗೆಳತಿಯರ ಮಕ್ಕಳ ಜೀವನಾನುಭವವನ್ನು ಕಣ್ಣಮುಂದಿಟ್ಟುಕೊಂಡೇ ತನ್ನ ನೋವಿನ ಕಥೆಯನ್ನು ಬಿಚ್ಚಿಡುವ ಸಂವಿಧಾನ ಇಲ್ಲಿ ಕಂಡುಬರುತ್ತದೆ.

ಪ್ರಕೃತಿಯ ಕರೆಗೆ ಓಗೊಟ್ಟು ರಾಜ ದುಷ್ಯಂತನ ಕ್ಷಣಿಕ ಮೋಹದ ಸೆಳೆತಕ್ಕೆ ಸಿಲುಕಿ ಪಡಬಾರದ ಕಷ್ಟ ಪಡುವ ಶಾಕುಂತಲೆ ಒಂದು ಕಡೆ, ಹಾಗೆಯೇ ತನ್ನ ಬಾಳ ಹಾದಿಯಲ್ಲಿ ಬಂದ ಹಲವಾರು ಹೆಣ್ಣುಗಳಂತೆ ಶಾಕುಂತಲೆಯೂ ಒಂದು ಎಂದು ಅವಳನ್ನು ಕಾಲ ಕಸ ಮಾಡುವ ದುಶ್ಯಂತ ಇಂದಿಗೂ ಪ್ರಸುತ್ತವಾಗುವ ಅದ್ಭುತ ಅನುಭವವನ್ನು ಈ ನಾಟಕ ಉಂಟು ಮಾಡುತ್ತದೆ.

ಸಮಾಜಕ್ಕೆ, ಪುರುಷಲೋಕಕ್ಕೆ ಶಾಕುಂತಲೆಯ ಪಾತ್ರವು ಸವಾಲೆಸೆಯುವ ಪ್ರಶ್ನೆಗಳು ಚರಿತ್ರೆಯುದ್ದಕ್ಕೂ ಸ್ತ್ರೀ ಸಮೂಹವು ತನ್ನ ಗರ್ಭದಲ್ಲಿ ಹುದುಗಿಸಿಕೊಂಡಿರುವ ಪ್ರಶ್ನೆಗಳೇ ಆಗಿವೆ. ಶಕುಂತಲೆ ಹೇಳುವ ''ನನ್ನ ಬದುಕಿನಲ್ಲಿಂದು ಶೀಲ, ಪಾತಿವ್ರತ್ಯಗಳಂತಹ ಹಳಸಲು ಶಬ್ದಕ್ಕೆ ಅರ್ಥವೇ ಇರಲಿಲ್ಲ. ಹಾದಿ ಹಾದಿಗೂ ಕಾಲು ಹಾದಿ ಮಾಡಿಕೊಂಡು ಹೊರಟು ಬಿಡುವ ಮಹಾರಾಜನಂತಹವರಿಗೆ ಕಾಡದ್ದು ನನ್ನಂಥವರಿಗೇಕೆ ಏಕಮುಖವಾಗಿ ಕಾಡಬೇಕು. ಗಂಡನಿಂದ ನಿರಾಕೃತಳಾಧ ನನಗೆ ಆತ ನನ್ನನ್ನು ಒಪ್ಪಿಕೊಳ್ಳಬೇಕೆಂಬ ಬೃಹತ್ ಕೋರಿಕೆಯೇನೂ ಇರಲಿಲ್ಲ. ಏಕೆಂದರೆ ಅದಾಗಲೇ ನಾನು ಆ ಪ್ರಾಮಾಣಿಕನನ್ನು ನಿರಾಕರಿಸಿದ್ದೆ..... . ಅಪ್ಪನಿಲ್ಲದೆಯೂ ಮಕ್ಕಳನ್ನು ಸಾಕುವ, ಬೆಳೆಸುವ, ಗುರಿ ಮುಟ್ಟಿಸುವ ದಾರಿಯನ್ನು ನಾನು ನಿಮಗೆಲ್ಲಾ ಹೇಳಿಕೊಡುತ್ತಿದ್ದೇನೆ '' ಎನ್ನುವ ಶಕುಂತಲೆಯಲ್ಲಿ ನಾವು ದಿಟ್ಟ ವ್ಯಕ್ತಿತ್ವದ ಆಧುನಿಕ ಮಹಿಳೆಯನ್ನು ಕಾಣುತ್ತೇವೆ.

ಇಂದಿನ ಸಮಕಾಲೀನ ಭಾರತದ ಜ್ವಲಂತ ಸಮಸ್ಯೆಗಳಾದ ಪರಿತ್ಯಕ್ತ ಹೆಣ್ಣು , ಅವಳಿಗಿರುವ ಸಾಂಸ್ಥಿಕ ಕಟ್ಟುಪಾಡುಗಳು, ಬಹು ಪತ್ನಿತ್ವ, ತಾಯಂದಿರೇ ಕೈಗೊಳ್ಳುವ ಶಿಶುಹತ್ಯೆ , - ಮುಂತಾದ ಸಮಸ್ಯೆಗಳನ್ನು ಅತ್ಯಂತ ವೈಜ್ಞಾನಿಕವಾಗಿ ನೋಡಬಲ್ಲ ಮನಸ್ಸು ಇಲ್ಲಿ ಕೆಲಸ ಮಾಡಿದೆ. ಆದ್ದರಿಂದಲೇ ಸಂವೇದನಾಶೀಲವಾದ ಕಣ್ವರ ಪಾತ್ರವನ್ನು ಚಿತ್ರಿಸುವುದೂ ಈ ಮನಸ್ಸಿಗೆ ಸಾಧ್ಯವಾಗುತ್ತದೆ. ಈ ನಾಟಕದಲ್ಲಿ ಬರುವ ಹೆಣ್ಣು ಪಾತ್ರಗಳೆಲ್ಲಾ 'ಒಂದೇ ದೋಣಿಯ ಪಯಣಿಗರು ನಾವು. ನಿನ್ನ ನೋವು ನನಗೆ ಅರ್ಥವಾಗುತ್ತದೆ ' ಎಂದು ಪ್ರಬುದ್ಧತೆಯನ್ನು ತೋರಬಲ್ಲ ಪಾತ್ರಗಳಾಗಿ ಸೃಷ್ಟಿಯಾಗಿರುವುದು ನಾಟಕಕಾರ್ತಿಯ ಆಶಯವೂ ಆಗಿದೆ. 'ಹೆಣ್ಣು ಬಳ್ಳಿ, ಗಂಡು ಮರ ಎನ್ನುವ ಪೂರ್ವಗ್ರಹದ ಪುರಾಣವನ್ನು ಛಿದ್ರಗೊಳಿಸಿರುವ ' ಶಾಕುಂತಲಾ ಕುಂಬಳ ಬಳ್ಳಿಯಂತೆ ಯಾವ ಗಿಡದ ಅವಲಂಬನವೂ ಇಲ್ಲದೆ ಬೆಳೆದವಳು ಎಂಬುದರೊಂದಿಗೆ ಸಮೀಕರಿಸುವ ರೀತಿಯಲ್ಲಿ ನಾಟಕ ಮುಕ್ತಾಯವಾಗಿರುವುದು ಅರ್ಥಪೂರ್ಣವಾಗಿದೆ.

- ಆಶಾ

ಉತ್ತರ ಶಾಕುಂತಲಾ (ನಾಟಕ)
ಎಂ. ಎಸ್. ವೇದಾ
ಪ್ರಥಮ ಮುದ್ರಣ - 2006 ಬೆಲೆ - ರೂ 60/- ಪುಟಗಳು - 88
ಪ್ರಕಾಶಕರು : ಸಂವಹನ, 12/1ಎ, ಈವನಿಂಗ್ ಬಜಾರ್ ಹಿಂಭಾಗ , ಶಿವರಾಂ ಪೇಟೆ, ಮೈಸೂರು.

ಮುಸ್ಲಿಂ ಮಹಿಳೆಯರು ಮತ್ತು ಸಂಘಟನೆ

- ಶಾಂತಾ ನಾಗರಾಜ್

ದಿನಾಂಕ ನಾಲ್ಕನೇ ಮತ್ತು ಐದನೇ ನವೆಂಬರ್ 2006ರ ದಿನಪತ್ರಿಕೆಯಲ್ಲಿ ಎರಡು ವರದಿಗಳು ಪ್ರಕಟವಾಗಿವೆ. ಎರಡರಲ್ಲೂ 'ಇದು ಇಮ್ರಾನಾ ಪ್ರಕರಣದ ಪುನರಾವರ್ತನೆ ' ಎನ್ನುವ ಶೀರ್ಷಿಕೆ ಇದೆ. ಪಶ್ಚಿಮ ಬಂಗಾಳದ ಮುರ್ಶಿದಾಬಾದ್ ಹಳ್ಳಿಯ ನಾಲ್ಕು ಮಕ್ಕಳ ತಾಯಿಯ ಮೇಲೆ ಮಕ್ಕಳ ಎದುರಲ್ಲೇ ಆವರದ್ದೇ ಕೋಮಿನ ಬಲಾಢ್ಯವ್ಯಕ್ತಿ ಅತ್ಯಾಚಾರ ಮಾಡಿದ್ದಾನೆ. ಮುಸ್ಲಿಮರೇ ಹೆಚ್ಚಾಗಿ ವಾಸಿಸುವ ಈ ಹಳ್ಳಿಯ ಗ್ರಾಮಪಂಚಾಯಿತಿ ಮುಖಂಡರು ತಪ್ಪನ್ನೆಲ್ಲಾ ಈ ನತದೃಷ್ಟ ಮಹಿಳೆಯ ಮೇಲೇ ಹೊರಿಸಿ ಅವಳನ್ನು ಗ್ರಾಮದಿಂದಲೇ ಹೊರ ಹಾಕಿದ್ದಾರೆ. 'ಅತ್ಯಾಚಾರದ ಕಾರಣ ಆಕೆಯ ಮದುವೆ ಅಮಾನ್ಯಗೊಂಡಿದೆ. ಆಕೆ ಮತ್ತೆ ತನ್ನ ಪತಿಯ ಜೊತೆ ಇರುವಂತಿಲ್ಲ. ಹಾಗಿ ಒಟ್ಟಿಗೆ ಇರುವುದೇ ಆದರೆ ಐವತ್ತು ಸಾವಿರ ರೂಪಾಯಿಗಳನ್ನು ದಂಡವಾಗಿ ಕಟ್ಟಬೇಕು ' ಎನ್ನುವ ಶರತ್ತನ್ನು ವಿಧಿಸಿದೆ. ಪಾಪ ಕೂಲಿಗಾರನಾಗಿರುವ ಮತ್ತು ತನ್ನ ಹೆಂಡತಿಯದೇನೂ ತಪ್ಪಿಲ್ಲ ಎಂದೇ ಭಾವಿಸುವ ಗಂಡ ಈ ಹಣ ಕಟ್ಟಲಾಗದೇ ಪರಿತಪಿಸುತ್ತಿದ್ದಾನೆ. ಪಂಚಾಯತ್ ಆ ಅತ್ಯಾಚಾರಿಗೂ ಹದಿನೆಂಟು ಸಾವಿರದ ದಂಡ ವಿಧಿಸಿದೆ. ಆದರೆ ಅವನು ಅದನ್ನು ಪಾವತಿಸುವ ಗೋಜಿಗೇ ಹೋಗದೇ ಅದೇ ಊರಿನಲ್ಲಿ ಆರಾಮವಾಗಿ ಓಡಾಡಿಕೊಂಡಿದ್ದಾನೆ.

ಬಿಹಾರದ ಪುರ್ನಿಯಾ ಗ್ರಾಮದ ಹತ್ತೊಂಬತ್ತು ವರ್ಷದ ಶೆಹನವಾಜ್ ಬೇಗಂ ಎನ್ನುವವಳ ಕಥೆ ಮತ್ತೊಂದು ವ್ಯಥೆ. ಈಕೆಗೆ ಎರಡು ವರ್ಷದ ಹಿಂದೆ ಸಮಿರುದ್ದೀನ್ ಎನ್ನುವ ಹುಡುಗನ ಜೊತೆ ಮದುವೆಯಾಯಿತು. ಆ ಹುಡುಗ ವೃತ್ತಿಗಾಗಿ ಮುಂಬೈಗೆ ಹೋದ. ಜೊತೆಯಲ್ಲೇ ಹೊರಟ ಹೆಂಡತಿಗೆ ಅರವತ್ತು ವರ್ಷದ ತಂದೆಯನ್ನು ನೋಡಿಕೊಳ್ಳುವ ಸಲುವಾಗಿ ಊರಲ್ಲೇ ಉಳಿಯಬೇಕೆಂದು ತಾಕೀತು ಮಾಡಿದ. ಆದರೆ ಆ ಮಾವ ವೃದ್ಧನಂತೆ ಹಿರಿತನವನ್ನೇನೂ ತೋರಲಿಲ್ಲ. ಬದಲಾಗಿ ಮಗ ಮರೆಯಾದ ಕೂಡಲೇ ತನ್ನ ಕಾಮಾಂಧತೆಯನ್ನು ಮೆರೆದ! ಸತತ ಸೊಸೆಯ ಮೇಲೆ ಅತ್ಯಾಚಾರ ಮಾಡಿದ. ಪ್ರತಿರೋಧ ತೋರಿದರೆ ಹೊಡೆತ ಬಡಿತ ಮನೆಯಲ್ಲೇ ಕೂಡಿಹಾಕುವುದು ಮುಂತಾದ ಹಿಂಸೆ ನಿತ್ಯವಾಯಿತು. ಇಷ್ಟು ಸಾಲದೆಂಬಂತೆ ಮುಂಬೈಯಲ್ಲಿದ್ದ ಮಗನಿಗೆ "ನಿನ್ನ ಹೆಂಡತಿ ನಡತೆ ಸರಿಯಿಲ್ಲ "ವೆಂದು ತಿಳಿಸಿ ಒಳಗೊಳಗೇ ಗುಟ್ಟಾಗಿ ಮಗನಿಗೆ ಮತ್ತೊಂದು ಮದುವೆಯನ್ನೂ ಮಾಡಿಬಿಟ್ಟ. ಶೆಹನವಾಜ್ ತಂದೆ ಪಂಚಾಯಿತಿಯ ಮೊರೆಹೊಕ್ಕರು. ಮುದುಕನಿಗೆ ತನ್ನ ರೊಟ್ಟಿ ಜಾರಿ ತುಪ್ಪಕ್ಕೇ ಬಿದ್ದಂತಾಯಿತು. ಏಕೆಂದರೆ ಪಂಚಾಯಿತಿ 'ಅತ್ಯಾಚಾರವಾಗಿರುವುದರಿಂದ ಅವಳ ಮದುವೆ ರದ್ದಾಯಿತೆಂದೂ ಅವಳು ಮಾವನ ಜೊತೆಯಲ್ಲೇ ಇರಬೇಕೆಂದೂ ' ತೀರ್ಪು ನೀಡಿತು!! ಆಕೆ ಈಗ ನ್ಯಾಯಾಲಯದ ಮೊರೆಹೋಗಿದ್ದಾಳೆ.

ಇಂಥಾ ಪ್ರಸಂಗಗಳು ಇತ್ತೀಚೆಗೆ ಹೆಚ್ಚಾಗಿ ನಡೆಯುತ್ತಿವೆ. ಬೆಳಕಿಗೆ ಬರುವುದು ಕೇವಲ ಬೆರಳೆಣಿಕೆಯಷ್ಟು ತೆರೆಯ ಮರೆಯಲ್ಲೇ ಉಳಿದುಬಿಡುವುದು ಎಷ್ಟೋ ! ಈ ಕೋಮಿನಲ್ಲಿ ಹೆಣ್ಣಿನ ವಿಚಾರಕ್ಕೆ ಬಂದಾಗಲೆಲ್ಲಾ ಭಾರತ ಯಾವುದೇ ಮೂಲೆಯಲ್ಲಿದ್ದರೂ ಇಂಥದೇ ತೀರ್ಪುಗಳನ್ನು ನೀಡಿ ಮಹಿಳೆಯನ್ನು ಶೋಷಣೆಗೆ ಗುರಿಪಡಿಸಲಾಗುತ್ತದೆ . ಹೀಗಾದಾಗ ನೋವುಂಡ ಮಹಿಳೆಯ ಮನೆಯವರು ಮಾತ್ರ ದುಃಖಿತರಾಗುತ್ತಾರೆ. ಉಳಿದ ಅದೇ ಕೋಮಿನವರು ತಮಗೂ ಅದಕ್ಕೂ ಸಂಬಂಧವೇ ಇಲ್ಲ ಎನ್ನುವಂತೆ ವರ್ತಿಸುತ್ತಾರೆ. 'ನಾಳೆ ನಮ್ಮ ಮನೆಯ ಹೆಣ್ಣು ಮಕ್ಕಳಿಗೇ ಈ ಸ್ಥಿತಿ ಬಂದರೆ ? ' ಎನ್ನುವ ಚಿಂತೆ ಮಾಡುವುದೇ ಇಲ್ಲ ಏಕೆ ? ಇದು ಮಾನವೀಯತೆಯಲ್ಲ ಎಂದು ಗೊತ್ತಿದ್ದರೂ ಧರ್ಮದ ಹೊದಿಕೆಯಿರುವ ಕಾರಣ ಹಿಂಜರಿಕೆ ಏಕೆ ? ಇದೇ ಧರ್ಮ ಇವರ ಮಕ್ಕಳಿಗೂ ಅನ್ವಯವಾಗುವುದಿಲ್ಲವೇ ? ಅಥವಾ ಇವರ ಕೋಮಿನ ಬಡವರಿಗೆ ಒಂದು ಧರ್ಮ ಸಿರಿವಂತರಿಗೆ ಒಂದು ಧರ್ಮ ಎಂದೇನಾದರೂ ಇದೆಯೇ ? ಈ ಎಲ್ಲ ಪ್ರಶ್ನೆಗಳೂ ಇದೇ ನೆಲದಲ್ಲಿ ಅವರ ಜೊತೆಗೇ ವಾಸಿಸುತ್ತಿರುವ ನಮ್ಮಂಥವರಿಗೆ ಹುಟ್ಟುತ್ತವೆ.

ಹಿಂದೆ ಗುಜರಾತಿನ ಗೋಧ್ರಾದಲ್ಲಿ ಗಲಭೆಯಾದದ್ದು ಎಲ್ಲರಿಗೂ ನೆನಪಿದೆ. ಅಯೋಧ್ಯೆಯಿಂದ ಬರುತ್ತಿದ್ದಕರಸೇವಕರಿದ್ದ ರೈಲನ್ನು ಸುಟ್ಟಿದ್ದೂ , ಅದರ ಪ್ರತೀಕಾರವೆನ್ನುವಂತೆ ಈ ಅಲ್ಪಸಂಖ್ಯಾತರ ಮಹಿಳೆಯರನ್ನೂ ಮಕ್ಕಳನ್ನೂ ಈ ಬಹುಸಂಖ್ಯಾತರು ಮಾರಣಹೋಮ ಮಾಡಿದ್ದೂ , ತಮ್ಮ ಖಡ್ಗದಿಂದ ಗರ್ಭಿಣಿ ಸ್ತ್ರೀಯರ ಹೊಟ್ಟೆ ಸೀಳಿದ್ದೂ ಇತಿಹಾಸ ದುರಂತವಷ್ಟೇ ಅಲ್ಲ ಕ್ರೌರ್ಯ ಕೂಡಾ. ಅದೇ ಸಮಯದಲ್ಲಿ ನಾವೆಲ್ಲಾ ಮಹಿಳಾ ಸಂಘಟನೆಗಳು ಈ ದೌರ್ಜನ್ಯದ ವಿರುದ್ಧ ಪ್ರತಿಭಟನೆ ನಡೆಸಿದೆವು. ಬೆಂಗಳೂರಿನ ಟೌನ್‌ಹಾಲ್ ಮುಂದೆ ನಿಂತಿದ್ದ ನಮ್ಮೊಡನೆ ಮತ್ತೊಂದು ದೊಡ್ಡಗುಂಪು ಬಂದು ಸೇರಿಕೊಂಡಿತು. ಅವರೆಲ್ಲರೂ ಮುಖ ಮಾತ್ರ ಕಾಣುವಂತೆ ಬಟ್ಟೆ ತೊಟ್ಟ ಮುಸ್ಲಿಂ ಮಹಿಳೆಯರಾಗಿದ್ದರು. ಅಂದು ನಮ್ಮೆಲ್ಲರಿಗೂ ನಿಜಕ್ಕೂ ಸಂತೋಷವಾಯಿತು. ಈ ಪರಿಯಲ್ಲಿ ವಿದ್ಯಾವಂತ ಮುಸ್ಲಿಂ ಮಹಿಳೆಯರು ನಮ್ಮ ಜೊತೆ ಚಳುವಳಿಯಲ್ಲಿ ಭಾಗವಹಿಸಿದರೆ, ನಿಜಕ್ಕೂ ಎಲ್ಲ ಚಳುವಳಿಗಳಿಗೂ ಬಲಬರುತ್ತದೆ ಎನಿಸಿತು.

ಬದಲಾಗುತ್ತಿರುವ ಮಹಿಳೆಯರ ಪ್ರತೀಕ

- ಎಚ್. ಎನ್. ಗೀತಾ

ವಿಶಾಖಪಟ್ಟಣದ ಗ್ರಾಮೀಣ ಸೌರಶಕ್ತಿ ಕಾರ್ಯಾಗಾರವನ್ನು ನೀವು ಒಮ್ಮೆ ನೋಡಬೇಕು. ಬಣ್ಣಬಣ್ಣದ ಹತ್ತಿಯ ಸೀರೆಗಳನ್ನುಟ್ಟ ಮಹಿಳೆಯರು, ಆತ್ಮವಿಶ್ವಾಸ ಸೂಸುತ್ತಿರುವ ಮಹಿಳೆಯರು, ಕಾರ್ಯನಿರತರಾಗಿರುತ್ತಾರೆ. ಅವರಿಗೆ ಭಾನುವಾರವೂ ಬಿಡುವಿಲ್ಲ. ಏಕೆಂದರೆ ವಿದ್ಯುತ್ ಬೆಳಕಿಗಾಗಿ ಹಾತೊರೆಯುತ್ತಿರುವ ಗ್ರಾಮೀಣ ಜನತೆಗಾಗಿ ಇವರು ಸೋಲಾರ್ ಲ್ಯಾಂಪು ಹಾಗೂ ಪ್ಯಾನಲ್‌ಗಳನ್ನು ತಯಾರಿಸುತ್ತಾರೆ. ಇವರಲ್ಲಿ ಜಯಮ್ಮ -ಶಾಂತಿ ಇದ್ದಾರೆ; ಲಕ್ಷ್ಮಮ್ಮ-ಜುಬೇದಾ ಇದ್ದಾರೆ; ಮೇರಿ ಮತ್ತು ರೋಜ ಇದ್ದಾರೆ. ಇವರು ಕಲಿತವರೇನಲ್ಲ. ಕಲಿತಿದ್ದರೂ 2 ಅಥವಾ 3ನೆಯ ತರಗತಿವರೆಗೆ ಕಲಿತಿದ್ದಿರಬಹುದು, ಅಷ್ಟೆ. ಇಲ್ಲಿಯವರೆಗೂ ಇವರು ಮನೆಕೆಲಸ ಮಾಡುತ್ತಲೋ, ಕಲ್ಲುಕುಟಿಗರಾಗಿಯೋ ದುಡಿದು ಅರೆಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಈಗ ಅವರು ಪವರ್ ಎಂಜಿನಿಯರ್‌ಗಳಾಗಿದ್ದಾರೆ. ನೇಕಾರರ ನರಳಾಟ, ಸಾಲದ ಗಾಳಕ್ಕೆ ಸಿಲುಕಿದ ರೈತರ ಬವಣೆ , ಹತಾಶೆ , ಆತ್ಮಹತ್ಯೆಗಳು , ನಿರುದ್ಯೋಗ ಇಂಥದೇ ವರದಿಗಳು ಎಲ್ಲೆಡೆಯಿಂದ ಬರುತ್ತಿರುವಾಗ ಇಂತಹ ಸುದ್ದಿ ನಿಜಕ್ಕೂ ಅಪ್ಯಾಯಮಾನವಾದುದು ಅಲ್ಲವೇ ?

ರಾಜಾಸ್ತಾನದ ಈ ಉದಾಹರಣೆಯನ್ನು ನೋಡಿ: ನೋರ್ತಿಬಾಯಿ ಅಲ್ಲಿನ ಸಾಮಾಜಿಕ ಕೆಲಸ ಸಂಶೋಧನಾ ಕೇಂದ್ರದಲ್ಲಿ ಕೆಲಸ ಮಾಡುತ್ತಾಳೆ. ಅಜ್ಮೀರ್ ಜಿಲ್ಲೆಯಲ್ಲಿನ ಹಳ್ಳಿಗಳಲ್ಲಿ ಲಭ್ಯವಿರುವ ನೀರಿನ ಸೆಲೆಗಳನ್ನು ಕಂಪ್ಯೂಟರಿನಲ್ಲಿ ಗುರುತಿಸುವ ಕೆಲಸ ಅವಳದು. ಇದೇ ಸಂಸ್ಥೆಯ ರಾಯ್ ಅವರು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ರೂರಲ್ ಡೆವೆಲಪ್‌ಮೆಂಟ್‌ಗೆ ಬಂದಿದ್ದಾಗ, ಗ್ರಾಮೀಣ ಮಹಿಳೆಯರಿಗೆ ಸೂಕ್ತ ತರಬೇತಿ ಕೊಟ್ಟು ಗ್ರಾಮೀಣ ಸೌರಶಕ್ತಿ ಕಾರ್ಯಾಗಾರ ಹಾಗೂ ತಂಡ ತಿಲೋನಿಯಾಗೆ 2002-04ರ ನಡುವೆ ಹಲವಾರು ಬಾರಿ ಹೋಗಿ ಸೋಲಾರ್ ಇಂಜಿನಿಯರುಗಳಾಗಿ ತರಬೇತಿ ಪಡೆದು ಬಂದರು. ಇಲ್ಲಿ ತರಬೇತಿ ಪಡೆದ ಪ್ರತಿಯೊಬ್ಬ ಮಹಿಳೆಯೂ ಇದುವರೆಗೆ 1000 ಸೌರ ದೀಪಗಳನ್ನು ಜೋಡಿಸಿದ್ದಾಳೆ. ಈ ದೀಪಗಳ ಬೆಲೆಯೇ ತಲಾ 3500 ರೂಗಳಾಗುತ್ತವೆ. ಜೋಡಿಸುವ ಕೆಲಸಕ್ಕೆ 2 ದಿನಗಳು ಬೇಕಾಗುತ್ತದೆ. ಇವರು ಕಿರು ಸೌರ ವಿದ್ಯುತ್ ಸರ್ಕ್ಯೂಟ್‌ಗಳನ್ನು ಸಹ ತಯಾರು ಮಾಡುತ್ತಾರೆ.

ಬರಿಗಾಲ ಮಹಿಳಾ ಇಂಜಿನಿಯರುಗಳ ಸಾಧನೆಯನ್ನು ಗುರುತಿಸಿರುವ ಆಂಧ್ರಪ್ರದೇಶ ಬುಡಕಟ್ಟು ವಿದ್ಯುತ್ ಕಂಪೆನಿಯು ಮಹಿಳಾ ಬರಿಗಾಲ ಸೌರ ಇಂಜಿನಿಯರುಗಳ ಸಂಘವನ್ನು ಆರಂಭಿಸಿದೆ. ಬುಡಕಟ್ಟು ಜನಾಂಗದವರ ಮನೆಗಳಿಗೆ ಸೌರಶಕ್ತಿಯನ್ನು ಒದಗಿಸುವ ಸಲುವಾಗಿ ಚೆನ್ನಮ್ಮ ಹಾಗೂ ಅವರ ತಂಡ ಸ್ಥಳೀಯ ಮಹಿಳೆಯರಿಗೆ ಸೌರಶಕ್ತಿ ವ್ಯವಸ್ಥೆಗಳನ್ನು ನಿರ್ವಹಿಸಿಕೊಂಡು ಹೋಗಲು ಸೂಕ್ತ ತರಬೇತಿಯನ್ನು ನೀಡಿದೆ. ಇಲ್ಲಿ ಉತ್ಪನ್ನವಾಗುವ ಸೌರಶಕ್ತಿಯಿಂದ ಪ್ರತಿ ಮನೆಯಲ್ಲಿ 2 ದೀಪಗಳು, ಒಂದು ಫ್ಯಾನು ಹಾಗೂ ಒಂದು ಕಪ್ಪು ಬಿಳುಪು ಟಿವಿಯನ್ನು ಪ್ರತಿ ದಿನಾ ಐದು ಗಂಟೆಗಳ ಕಾಲ ಉಪಯೋಗಿಸಬಹುದಾಗಿದೆ. ಸೌರಶಕ್ತಿಯ ಸಂಪರ್ಕ ಬಯಸುವವರು ಅಳವಡಿಕಾ ಶುಲ್ಕವಾಗಿ ಸಾವಿರ ರೂ.ಗಳನ್ನು ಕಟ್ಟಬೇಕು. ನಂತರ ತಿಂಗಳ ನಿರ್ವಹಣಾ ವೆಚ್ಚವಾದ 100 ರೂ.ಗಳನ್ನು ಹಳ್ಳಿಯ ಶಕ್ತಿ ಮತ್ತು ಪರಿಸರ ಸಮಿತಿಗೆ ಕಟ್ಟಬೇಕು. ಬುಡಕಟ್ಟು ಜನಾಂಗದವರು ಪ್ರತಿ ತಿಂಗಳು 100 ರೂ.ಗಳನ್ನು ಕಟ್ಟಬಹುದೇ ಎನ್ನುತ್ತೀರಾ ? ಯಾಕಿಲ್ಲ ? ಧಾರಾಳವಾಗಿ ಕಟ್ಟಬಹುದು. ಕೆಲವರು ಪೂರ್ತಿ ಹಣ ಪಾವತಿಸಿದರೆ, ಕೆಲವರು ಭಾಗಶಃ ಪಾವತಿ ಮಾಡಿದ್ದಾರೆ. ಇಲ್ಲಿ ಸ್ವಸಹಾಯ ಸಂಘಗಳು ಸಹ ಪ್ರಮುಖ ಪಾತ್ರ ವಹಿಸುತ್ತವೆ.

ಪ್ರಸ್ತುತ ಚೆನ್ನಮ್ಮ ಮತ್ತು ತಂಡದ ಪ್ರತಿಯೊಬ್ಬ ಮಹಿಳೆಯೂ ತಿಂಗಳಿಗೆ ಏನಿಲ್ಲವೆಂದರೂ 2400-3000 ರೂ.ಗಳವರೆಗೆ ದುಡಿಯುತ್ತಿದ್ದಾರೆ. ಮನೆ ಬೆಳಗಿಸುವ ಕೆಲಸದಲ್ಲಿ ಇವರ ಬಾಳು ಬೆಳಕಾಗಿದೆ. ಇವರು ಬದಲಾಗುತ್ತಿರುವ ಭಾರತದ ಪ್ರತೀಕ. ಬದಲಾಗುತ್ತಿರುವ ಮಹಿಳೆಯರ ಪ್ರತೀಕ.

(ಆಧಾರ)

ಬೇಲಿಯೇ ಮುಳ್ಳಾದಾಗ

ಡಾ. ಜಯಂತ್ ಮತು ಅಡ್ವೋಕೇಟ್ ಗಾರ್ಗಿ ಸಮಾಧಾನದ ಉಸಿರೆಳೆದುಕೊಂಡರು. ಕೊನೆಗೂ ಕಾಡುತ್ತಿದ್ದ ಸಮಸ್ಯೆಗೆ ಪರಿಹಾರ ಸಿಗುವಂತೆ ಕಂಡಿತ್ತು. ವಾಸ್ತವದಲ್ಲಿ ಸಮಸ್ಯೆ ಇದ್ದದ್ದು ಡಾ. ಜಯಂತ್ ಅವರಿಗೆ. ಅದು ಕಛೇರಿಯ ಸಮಸ್ಯೆ. ಅವರು ಕೆಲಸ ಮಾಡುತ್ತಿದ್ದ ಆಸ್ಪತ್ರೆಯಲ್ಲಿ ಏನೋ ಕಿರಿಕಿರಿ ಉಂಟಾಗಿ ಅವರಿಗೆ ಸಂಬಳವನ್ನೇ ನಿಲ್ಲಿಸಿತ್ತು ಅಲ್ಲಿನ ಆಡಳಿತ ವರ್ಗ. ಬಹಳಷ್ಟು ದಿನ ನೇರವಾಗಿ ಬಡಿದಾಡಿ ಈಗ ಪೋಲೀಸರ ಮೊರೆ ಹೋಗುವುದೇ ಸರಿ ಎಂಬ ನಿರ್ಧಾರಕ್ಕೆ ಡಾ. ಜಯಂತ್ ಹಾಗೂ ಅವರ ಪತ್ನಿ ಗಾರ್ಗಿ ಬಂದಿದ್ದರು. ಅದಕ್ಕೆ ಸರಿಯಾಗಿ ಪೋಲೀಸ್ ಸ್ಟೇಷನ್ನಿನಲ್ಲಿ ಭೇಟಿಯಾದ ತನಿಖಾಧಿಕಾರಿ ಅನ್ಯಾಯದ ವಿರುದ್ಧ ಹೋರಾಡಲು ಸಹಾಯ ಮಾಡುವುದಕ್ಕೆ ಉತ್ಸುಕನಾಗಿರುವಂತೆ ಕಂಡ. ಬಹಳ ಸಭ್ಯನಂತೆಯೂ ಕಂಡಿದ್ದ; ಅವನೇ ಅರ್ಘ್ಯ ಚಕ್ರಬೋರ್ತಿ. ಹೀಗಾಗಿ ಬಹಳ ದಿನಗಳ ನಂತರ ಅವರಿಗೆ ಸ್ವಲ್ಪ ಟೆನ್ಷನ್ ಕಡಿಮೆಯಾಯಿತು. ಅಲ್ಲದೆ ಡಾ. ಜಯಂತ್ ಯಾವುದೋ ಸಮ್ಮೇಳನದಲ್ಲಿ ಭಾಗವಹಿಸಲು ಕೆಲದಿನಗಳ ಕಾಲ ಕೆನಡಾಗೆ ಹೋಗಬೇಕಿತ್ತು. ಇನ್ನಾದರೂ ಅವರು ಸ್ವಲ್ಪ ನಿರಾತಂಕವಾಗಿ ಹೋಗಬಹುದೋ? ಮತ್ತೊಮ್ಮೆ ಸಮಸ್ಯೆ ಆರಂಭವಾಗಲಿದೆಯೆಂದು ಅವರಿಬ್ಬರೂ ಖಂಡಿತ ಎಣಿಸಿರಲಿಲ್ಲ.

ಕೆನಡಾಗೆ ತೆರಳುವ ಮುಂಚೆ ಡಾ. ಜಯಂತ್ ತಮ್ಮ ಪತ್ನಿಯ ಮೊಬೈಲ್ ನಂಬರನ್ನು ಈ ತನಿಖಾಧಿಕಾರಿಗೆ ಇತ್ತು ಹೋದರು - ಕೇಸಿನ ವಿಷಯದಲ್ಲಿ ಸಂಪರ್ಕಿಸುವ ಸಂದರ್ಭ ಬಂದರೆ ಎಂಬ ದೃಷ್ಟಿಯಿಂದ.

ಡಾ. ಜಯಂತ್ ಊರಿಗೆ ಹೋದ ಮೇಲೆ ಅರ್ಘ್ಯ ಚಕ್ರಬೋರ್ತಿಯಿಂದ ಗಾರ್ಗಿಗೆ ಮೇಲಿಂದ ಮೇಲೆ ಟೆಲಿಫೋನ್ ಕರೆಗಳು ಬರಲಾರಂಭಿಸಿದವು. ಆರಂಭದಲ್ಲಿ ಕೊಲ್ಕತ್ತಾ ಹೈಕೋರ್ಟಿನಲ್ಲಿ ಅಡ್ವೋಕೇಟ್ ಆಗಿದ್ದ ಆಕೆಗೆ ಅವನು ತನ್ನ ವ್ಯಾಪ್ತಿಗೆ ಬಂದಿದ್ದ ಕೇಸುಗಳನ್ನು ತೆಗೆದುಕೊಳ್ಳುವಂತೆ ಕೇಳುತ್ತಿದ್ದ. ಗಾರ್ಗಿ ಕೇವಲ ಸಿವಿಲ್ ಕೇಸುಗಳನ್ನಷ್ಟೇ ತೆಗೆದುಕೊಳ್ಳುವುದರಿಂದ ಆತನ ಬೇಡಿಕೆಯನ್ನು ನಿರಾಕರಿಸುತ್ತಿದ್ದಳು. ಆದರೂ ಈ ಕರೆಗಳು ನಿಲ್ಲಲಿಲ್ಲ. ಏನೋ ಒಂದು ನೆಪ ಮಾಡಿಕೊಂಡು ಟೆಲಿಫೋನ್ ಮಾಡುತ್ತಿದ್ದವ ಕೊನೆಗೆ ಗಾರ್ಗಿಯ ಅಂದಚಂದದ ಬಣ್ಣನೆಯನ್ನೂ ಆರಂಭಿಸಿದ. ಆಕೆಯ ಸೌಂದರ್ಯ ನಷ್ಟವಾಗುತ್ತಿದೆ ಎಂದೂ, ಟಿವಿ ಸೀರಿಯಲ್ಲುಗಳಲ್ಲಿ ಅದೃಷ್ಟ ಪರೀಕ್ಷಿಸಬೇಕೆಂದೂ ಸಲಹೆ ನೀಡಿದ. ಸ್ವತಃ ಟಿವಿ ಧಾರಾವಾಹಿಯಲ್ಲಿ ಪಾತ್ರ ಮಾಡಿದ್ದ ಅರ್ಘ್ಯ ತನಗೆ ಉದ್ಯಮದವರ ಪರಿಚಯವಿದೆಯೆಂದೂ, ಆಕೆಗೆ ಅವಕಾಶ ಒದಗಿಸುವುದಾಗಿಯೂ ಹೇಳಿದ. ನೇರವಾಗಿ ಒಲ್ಲೆ ಎಂದು ಹೇಳಿ ಪೋಲೀಸರನ್ನು ಎದುರು ಹಾಕಿಕೊಳ್ಳಲಾದೀತೇ ? ಗಾರ್ಗಿ ನಯವಾಗಿಯೇ ನಿರಾಕರಿಸಿದರೂ ಆತ ಮತ್ತೆ ಫೋನ್ ಮಾಡಿ ಭಾವಚಿತ್ರದೊಂದಿಗೆ ಒಂದಿಬ್ಬರು ಮಹನೀಯರನ್ನು ಭೇಟಿಯಾಗಲು ಹೇಳಿದ. ಈ ಪ್ರಸಂಗವನ್ನು ಹೇಗಾದರೂ ಮಾಡಿ ತಳ್ಳಿಹಾಕಬೇಕೆಂಬ ಉದ್ದೇಶದಿಂದ ಗಾರ್ಗಿ ಸೀರಿಯಲ್ಲುಗಳಲ್ಲಿ ಸಂಭಾವನೆ ಎಷ್ಟೆಂದು ಕೇಳಿದರು. ಆದರೆ ಅರ್ಘ್ಯನ ಉತ್ತರ ಕೇಳಿ ಅವರಿಗೆ ದಂಗು ಬಡಿದಂತಾಯಿತು. ಅವನು ಹೇಳಿದ್ದು 1-2 ಗಂಟೆಗಳ ಕಾಲ ಎಂದರೆ 20000 ರೂ.ಗಳಿಗೆ ಮೋಸವಿಲ್ಲ; ಮಾಡಬೇಕಾದ್ದೇನೆಂದರೆ ಅವನ ಕೆಲವು ಗೆಳೆಯರನ್ನು ಖುಷಿ ಪಡಿಸುವುದು. ಕೋಪ ಅವಮಾನಗಳಿಂದ ಗಾರ್ಗಿ ತನ್ನ ಗಂಡನಿಗೆ ಫೋನ್ ಮಾಡಿ ವಿಷಯ ತಿಳಿಸಿದರು. ಸಹಸ್ರಾರು ಮೈಲಿಗಳ ದೂರದಲ್ಲಿ ಕುಳಿತಿದ್ದ ಅವರಿಗೂ ದಿಕ್ಕು ತೋಚದ ಪರಿಸ್ಥಿತಿಯೇ. ಯಾರ ನೆರವು ತಾನೇ ಕೇಳಬಹುದು ? ಪೋಲೀಸರ ಸಹಾಯ ಕೇಳುವ ಪ್ರಶ್ನೆಯೇ ಬರುವುದಿಲ್ಲ. ಇಂತಹ ಸ್ಥಿತಿಯಲ್ಲಿರುವಾಗ ಮತ್ತೆ ಗಾರ್ಗಿಗೆ ಅರ್ಘ್ಯನಿಂದ ಫೋನು, ಅದೇ ಆಹ್ವಾನ.

ಗಾರ್ಗಿ ಈ ವಿಷಯದ ಬಗ್ಗೆ ತನ್ನ ಸ್ನೇಹಿತರ ಸಲಹೆ ಕೇಳಿದರು. ಎಲ್ಲರದೂ ಒಂದೇ ರೀತಿಯ ಅಭಿಪ್ರಾಯ - ಪೋಲೀಸರ ಹಗೆ ಬೇಡ. ಅವರನ್ನು ಎದುರು ಹಾಕಿಕೊಳ್ಳಬೇಡ. ಸುಮ್ಮನಿದ್ದು ಬಿಡು. ಆರೆ, ಆತ ಒತ್ತಡ ಹಾಕುತ್ತಿದ್ದರೆ ಸುಮ್ಮನಿರುವುದಾದರೂ ಹೇಗೆ ? ಒಂದು ಸಾಮಾಜಿಕ ಜವಾಬ್ದಾರಿ ಎನ್ನುವುದು ನಮಗಿಲ್ಲವೇ ? ಅದರಲ್ಲೂ ಕಾನೂನು ಕ್ಷೇತ್ರದಲ್ಲಿರುವ ನಮ್ಮಂಥವರಿಗೆ ? ಗಾರ್ಗಿಯ ಯೋಚನಾ ಲಹರಿ ಹೀಗೆಯೇ ಸಾಗಿತು. ಕೊನೆಗೆ ಕಾನೂನು ಪರಿಣಿತರ ಬೆಂಬಲ ಅಪೇಕ್ಷಿಸಿ ಗಾರ್ಗಿ ಕೊಲ್ಕತ್ತಾ

ಹೈಕೋರ್ಟಿನ ಹಿರಿಯ ಅಡ್ವೋಕೇಟ್ ರಬಿಲಾಲ್ ಮೊಯ್‌ತ್ರ ಅವರನ್ನು ಸಂಧಿಸಿ ತಮ್ಮ ಸಂದಿಗ್ಧ ಪರಿಸ್ಥಿತಿಯನ್ನು ವಿವರಿಸಿದರು. ಅವರೂ ಮೊದಲು ಈ ವಿಷಯವನ್ನು ಕಡೆಗಣಿಸಲು ಹೇಳಿದರಾದರೂ, ಕೊನೆಗೆ ಮಹಿಳಾ ಆಯೋಗದ ಮೊರೆ ಹೋಗಲು ತಿಳಿಸಿದರು. ಗಾರ್ಗಿ ಸೀನಿಯರ್ ಅಡ್ವೋಕೇಟ್ ಹಾಗೂ ಮಹಿಳಾ ಆಯೋಗದ ಸದಸ್ಯರೂ ಆಗಿದ್ದ ಭಾರತಿ ಮುಸದ್ದಿ ಅವರ ಕೈಕೆಳಗೂ ಸ್ವಲ್ಪ ಕಾಲ ಕೆಲಸ ಮಾಡಿದ್ದರು. ತಮ್ಮ ಕತೆಯನ್ನು ಗಾರ್ಗಿ ಹೇಳುತ್ತಿದ್ದ ಸಮಯದಲ್ಲೇ, ಅದೇ ಕೋಣೆಯಲ್ಲೇ ಅವರೂ ಉಪಸ್ಥಿತರಿದ್ದರು. ಆಕೆಯಿಂದ ಗಾರ್ಗಿ ಯಾವ ನೆರವೂ ಸಿಗಲಿಲ್ಲ. ಕೊನೆಗೆ, ಒಂದೆರಡು ಸಂತಾಪದ ಮಾತು......ಊಹ್ಞೂ...!

ಇತ್ತ ಅರ್ಘ್ಯನ ಫೋನ್ ಕರೆ ಮತ್ತೆ ಮತ್ತೆ ಬರಲಾರಂಭಿಸಿದವು. ಆತನ ಮಾತಿನಲ್ಲಿ ಅಶ್ಲೀಲತೆಯೂ ಹೆಚ್ಚಿತ್ತು. ಆತ ಸವಿವರವಾದ ಯೋಜನೆಯನ್ನೂ ಮುಂದಿಟ್ಟ ಅದೊಂದು ವ್ಯವಸ್ಥಿತ ವೇಶ್ಯಾವಾಟಿಕೆಯ ಯೋಜನೆಯಾಗಿತ್ತು. ಈ ಎಲ್ಲ ಅವಧಿಯಲ್ಲಿ ಗಾರ್ಗಿಗೆ ಬೆಂಬಲವಾಗಿ ನಿಂತದ್ದು ಆಕೆಯ ಗಂಡ ಡಾ.ಜಯಂತ್ ಮಾತ್ರವೇ. ಪೋಲೀಸರಿಂದ ಸಹಾಯ ಯಾಚಿಸುವುದಂತೂ ವ್ಯರ್ಥವೇ ಎಂಬುದಂತೂ ಅವರಿಗೆ ಖಚಿತವಾಗಿತ್ತು. ಬೇರೆಯವರು ಇವರ ಮಾತನ್ನು ನಂಬಬೇಕಲ್ಲ! ಎಲ್ಲ ಕೋನಗಳಿಂದಲೂ ಚಿಂತಿಸಿದ ಅವರು ಕೊನೆಗೆ ಸಂಪರ್ಕಿಸಿದ್ದು ಸ್ಟಾರ್ ಆನಂದ ಎಂಬ ಖಾಸಗಿ ಟಿವಿ ಚಾನೆಲ್ಲನ್ನು. ಚಾನೆಲ್‌ಸಹ ಇವರ ಮಾತನ್ನು ಮೊದಲು ನಂಬಲಿಲ್ಲ. ಆದರೆ ಧ್ವನಿಮುದ್ರಿತ ಸಂಭಾಷಣೆಯನ್ನು ಕೇಳಿಸಿದಾಗ ಅವರೂ ದಂಗಾದರು. ಸರಿ, ರಹಸ್ಯ ಕ್ಯಾಮೆರಾಗಳನ್ನು ಬಳಸಿ ಆತನನ್ನು ಜಾಲದಲ್ಲಿ ಹಿಡಿವ ಯೋಜನೆ ರೂಪಿಸಲಾಯಿತು.. ಹೇಗಿದ್ದರೂ ಅರ್ಘ್ಯ ಚಕ್ರಬೋರ್ತಿಯ ಕಾಟ ಮುಂದುವರಿದೇ ಇತ್ತು. ಕೊನೆಗೂ ರಾಜ್‌ಪುರದ ಮನೆಯೊಂದರಲ್ಲಿ ಸಂಧಿಸುವುದಾಗಿ ಗಾರ್ಗಿ ಒಪ್ಪಿಕೊಂಡಾಗ ಅರ್ಘ್ಯನಿಗೆ ಯಾವ ರೀತಿಯ ಸಂದೇಹವೂ ಬರಲಿಲ್ಲ. ಅಂತೆಯೇ, ಗಾರ್ಗಿ ರಾಜ್‌ಪುರದ ಮನೆಯಲ್ಲಿ ಅರ್ಘ್ಯನನ್ನು ಸಂಧಿಸಿದಳು. ಈ ನಿರ್ಧಾರದ ಹಿನ್ನೆಲೆ ಗೊತ್ತಿರದ ಅರ್ಘ್ಯ ಮುಖತಃ ಗಾರ್ಗಿಯ ಸ್ತುತಿ ಆರಂಭಿಸಿದ; ತನ್ನ ಯೋಜನೆಗಳನ್ನು ಹೇಳತೊಡಗಿದ. ಒಮ್ಮೆ ಗಾರ್ಗಿಯ ಸೀರೆಯನ್ನೂ ಎಳೆದ. ರಹಸ್ಯ ಕ್ಯಾಮೆರಾಗಳು ಸದ್ದಿಲ್ಲದೆ ಕೆಲಸ ಮಾಡುತ್ತಿದ್ದವು.

ರೆಕಾರ್ಡಿಂಗ್ ಮುಗಿಸಿ, ಸ್ಟಾರ್ ಆನಂದ ಸಿಬ್ಬಂದಿಯೊಂದಿಗೆ ಗಾರ್ಗಿ ಮತ್ತು ಡಾ.ಜಯಂತ್ ಅರ್ಘ್ಯನ ಬಗ್ಗೆ ಪೋಲೀಸರಿಗೆ ಲಿಖಿತ ದೂರು ಸಲ್ಲಿಸಿದರು. ಮುಜುಗರಕ್ಕೊಳಗಾದ ಪೋಲೀಸರು ತ್ವರಿತ ಕ್ರಮ ಕೈಗೊಂಡರು. ಅರ್ಘ್ಯನನ್ನು ಸೇವೆಯಿಂದ ವಜಾ ಮಾಡಲಾಯಿತು. ಈತನ ವಿರುದ್ಧ ಕೇಸು ದಾಖಲಾಯಿತು.

ಇದು ಕಳೆದ ವರ್ಷ, ಅಂದರೆ 2005ರಲ್ಲಿ ನಡೆದ ಘಟನೆ. ಈಗ ಗಾರ್ಗಿಯ ಜೀವನ ಮಾಮೂಲಾಗಿ ಸಾಗಿದೆ. ಸಾರ್ವಜನಿಕವಾಗಿ ಅವರಿಗೆ ಪ್ರಶಂಸೆಯೂ ದೊರೆತಿದೆ - ಮೂದಲಿಕೆಯೂ ಸಿಕ್ಕಿದೆ. ಜನ ನನ್ನ ಬಗ್ಗೆ ಏನು ತಿಳಿಯುತ್ತಾರೋ ಏನೋ ಎಂದು ನಾನು ಚಿಂತಿಸುವುದಿಲ್ಲ. ನಾನಂತೂ ಸುಮ್ಮನೆ ಕೂಡುವವಳಲ್ಲ. ಕಾನೂನು ಪಾಲಿಸುವವರೇ ಕಾನೂನು ಮುರಿದರೆ, ಅಂಥವರನ್ನು ಬಹಿರಂಗ ಪಡಿಸಲೇಬೇಕು. ನನಗೆ ಅವಮಾನವಾಯಿತೆಂದು ನಾಚಿಕೆಯಿಂದ ಕುಗ್ಗುವ ಪ್ರಮೇಯವೇನೂ ಇಲ್ಲ. ನನ್ನ ಘನತೆಗೇನೂ ಕುಂದು ಬಂದಿಲ್ಲ ಎನ್ನುವ ಗಾರ್ಗಿಗೆ ಅರ್ಘ್ಯ ಚಕ್ರಬೋರ್ತಿಯ ಕೃತ್ಯದಿಂದಾಗಿ ಅವನ ಕುಟುಂಬದವರಿಗಾಗಿರುವ ನಾಚಿಕೆ ಅವಮಾನಗಳಿಗಾಗಿ ಪರಿತಾಪ ಪಡುತ್ತಾರೆ.

- ಗೀತಾ.

(ಮೂಲ : ಶ್ರೀಮತಿ ಸುದೇಷ್ಣಾ ಚಕ್ರವರ್ತಿ, ಸೊಸೈಟಿ - ಏಪ್ರಿಲ್ 2006)

ಬಂಜೆಂಬ ಶಬುದ ಬಿಡಿಸಯ್ಯ

- ಚಂದ್ರಮತಿ ಸೋಂದಾ

ತಾಯ್ತನವು ಒಂದು ಜೈವಿಕ ಕ್ರಿಯೆ. ಪ್ರಕೃತಿಯ ನಿರಂತರತೆಗೆ ಇದು ಅನಿವಾರ್ಯ. ಎಲ್ಲ ಜೀವಿಗಳಲ್ಲಿಯೂ ಸಂತಾನವು ಸ್ವತಂತ್ರವಾಗುವವರೆಗೆ ಬೆಳೆಸುವ ಕಾರ್ಯ ಹೆಚ್ಚಾಗಿ ತಾಯಿಯದಾಗಿರುತ್ತದೆ. ಕೆಲವು ಜೀವಿಗಳಲ್ಲಿ ಇದಕ್ಕೆ ತಂದೆಯ ಪಾಲು ಸಲ್ಲುತ್ತದೆ. ಮಾನವ ಜೀವಿಯಲ್ಲಿ ಮಗುವಿನ ಲಾಲನೆ ಪಾಲನೆಗಳ ಜವಾಬ್ದಾರಿ ಸಂಪೂರ್ಣ ತಾಯಿಯದೆಂದು ಭಾವಿಸುತ್ತ ಬರಲಾಗಿದೆ. ಸುಧೀರ್ಘ ಕಾಲ ಆಕೆ ಮಗುವನ್ನು ತನ್ನ ಬಸಿರಲ್ಲಿ ಇರಿಸಿಕೊಳ್ಳಬೇಕಾಗಿರುವುದರಿಂದ ಮಗುವಿನೊಂದಿಗೆ ಭಾವನಾತ್ಮಕವಾದ ಸಂಬಂಧ ಸಹಜವಾಗಿ ಬೆಳೆಯುತ್ತದೆ. ಜನಿಸಿದ ಮೇಲೂ ಹಾಲುಣಿಸುವ ಕ್ರಿಯೆಯಿಂದಾಗಿ ಅವಳಿಗೆ ಆ ಮಗುವಿನ ಸಾಮೀಪ್ಯ ಅಧಿಕವಾಗಿರುತ್ತದೆ. ಈ ಎಲ್ಲ ಜೈವಿಕ ಕಾರಣಗಳೊಂದಿಗೆ ಭಾವನಾತ್ಮಾಕ ಅಂಶಗಳನ್ನು ತಳಕು ಹಾಕಿ ತಾಯ್ತನವನ್ನು ವೈಭವೀಕರಿಸುವ ಪರಿಪಾಠ ಬೆಳೆಯಿತು. ಇದು ಯಾವ ಹಂತ ತಲುಪಿತೆಂದರೆ ತಾಯಿಯಾಗದ ಹೆಣ್ಣಿನ ವ್ಯಕ್ತಿತ್ವ ಪರಿಪೂರ್ಣವಾಗದೆಂಬ ಭಾವನೆಯನ್ನು ಸಮಾಜದಲ್ಲಿ ಪ್ರತಿಪಾದಿಸಲಾಯಿತು. "Motherhood is so vital to a woman that failure to bear children, either involuntarily or voluntarily, is impossible for most female to contemplate; its obsence is unnatural and unfeminine. This is why a meternal instinct is deemed as a natural endowment without which a woman cannot claim to be a real woman." (Gender and Society in India Vol - I p 186) ಎನ್ನುವ ಜಿ.ಎನ್. ರಾಮು ಅವರ ಅಭಿಪ್ರಾಯ ಸಮರ್ಥನೀಯ. ಸಂತಾನವಿಲ್ಲದ ಮಹಿಳೆಗೆ 'ಬಂಜೆ' ಎನ್ನುವ ಪಟ್ಟಕಟ್ಟಿ ಅವಳನ್ನು ಕೀಳಾಗಿ ಕಾಣುವ ಪ್ರವೃತ್ತಿ ಬಲಿಯಿತು. ವಂಶದ ಮುಂದುವರಿಕೆಗೆ ಸಂತಾನೋತ್ಪತ್ತಿ ಅಗತ್ಯ ಎನ್ನುವುದು ಸತ್ಯವಾದರೂ ಪತಿ-ಪತ್ನಿಯರಲ್ಲಿ ಯಾರಲ್ಲಿ ದೋಷವಿದ್ದರೂ ಮಗುವಾಗದಿರುವುದಕ್ಕೆ ಮಹಿಳೆಯೇ ತಪ್ಪಿತಸ್ಥಳೆನ್ನವಂತೆ ತಿಳಿಯುತ್ತ ಬರಲಾಗಿದೆ. ಹಾಗಾಗಿ, 'ಬಂಜೆ' ಎನ್ನಿಸಿಕೊಳ್ಳಲು ಆಕೆ ಹೆದರುತ್ತ ಬಂದಿದ್ದಾಳೆ. ಮಗುವಿಲ್ಲದಿದ್ದರೆ ಅವಳ ಬಾಳು ವ್ಯರ್ಥ ಎಂದು ಭಾವಿಸುತ್ತ ಬರಲಾಗಿದೆ. ಗರ್ಭಂ ಬಳೆಯದ ಬಾಳಕಿಯ ಬಸಿ★ನರ್ಥಕಮಲೇ' ಎಂದು ಯೋಚಿಸುವ ಪರಿಸರದಲ್ಲಿ ಮಗುವನ್ನು ಪಡೆಯಲೇಬೇಕೆಂಬ ಹಂಬಲ ಅವಳಲ್ಲಿ ತೀವ್ರವಾಗಿರುವುದು ಸಹಜ. ತನ್ನ ಬದುಕು 'ಬಾಳೆಲೆಯ ಹಾಸ್ಯುಂಡು ಬೀಸಿ ಒಗೆದಂಗೆ' ಆಗಬಾರದು, 'ಹಂಗಿನ ಬಾನ' ತನಗೆ ಬೇಡವೆಂದು ತೀರ್ಮಾನಿಸುವ ಆಕೆ ದೈವವನ್ನು 'ಸಂಜೆಗೆ ಕೊಟ್ಟು ಮುಂಜಾನೆ ಕೊಳ್ಳಯ್ಯ ಬಂಜೆಂಬ ಶಬುದ ಬಿಡಿಸಯ್ಯ' ಎಂದು ಬೇಡುವುದಲ್ಲದೆ ಮತ್ತೇನನ್ನೂ ಮಾಡಲಾರಳು. ಅವಳಿಗೆ ಮಗು ಬೇಕೆಂಬ ಅಭೀಪ್ಸೆಗಿಂತ ಬಂಜೆತನದ ಅಭಿಶಾಪದಿಂದ ಪಾರಾಗಬೇಕೆಂಬ ಬಯಕೆಯೇ ಅಧಿಕವಾಗಿರುವುದು ವ್ಯಕ್ತವಾಗುತ್ತದೆ.

ಮಾನವ ಜೀವಿಯಲ್ಲಿ ಶೈಶವದ ಅವಧಿ ಇತರ ಪ್ರಾಣಿಗಿಂತ ಹೆಚ್ಚಾಗಿರುವುದರಿಂದ ಹುಟ್ಟಿದ ಮಗು ಅವಲಂಬನೆಯನ್ನು ಬಿಟ್ಟು ಸ್ವತಂತ್ರವಾಗಿ ತನ್ನ ಕೆಲಸವನ್ನು ಮಾಡಿಕೊಳ್ಳಲು ಕನಿಷ್ಟ ಹತ್ತು ವರ್ಷಗಳಾದರೂ ಬೇಕಾಗುತ್ತದೆ. ಈ ಸುಧೀರ್ಘ ಅವಧಿಯ ಪಾಲನೆ ಪೋಷಣೆಗಳ ಜವಾಬ್ದಾರಿ ಬಹುಪಾಲು ತಾಯಿಯದೇ ಆಗಿರುವುದರಿಂದ ಅವಳ ದೈಹಿಕ, ಮಾನಸಿಕ ಸಾಮರ್ಥ್ಯವನ್ನು ಇದು ಅಪೇಕ್ಷಿಸುತ್ತದೆ. ಬದಲಾಗಿ ನಮ್ಮ ಸಾಮಾಜಿಕ ಬದುಕಿನ ರೀತಿಯಿಂದಾಗಿ ಇಂದು ಮಹಿಳೆ ಈ ಜವಾಬ್ದಾರಿಯನ್ನು ನಿಭಾಯಿಸಲು ಸಾಕಷ್ಟು ಹೆಣಗಾಡುತ್ತಿದ್ದಾಳೆ. ಮನೆಯೊಳಗಿನ ಕೆಲಸ ಹಾಗೂ ಯಾವುದೇ ಬಗೆಯ ಹೊರಗಿನ ದುಡಿಮೆ ಎರಡನ್ನೂ ಮಾಡಬೇಕಾದ ಸಂದರ್ಭದಲ್ಲಿ ಇವೆರಡನ್ನೂ ಸರಿದೂಗಿಸುವುದು ಅವಳಿಗೆ ಭಾರವಾಗತೊಡಗಿದೆ; ಮಾನಸಿಕ ಒತ್ತಡಕ್ಕೆ ಕಾರಣವಾಗುತ್ತಿದೆ. ಮಹಿಳೆಯ ಈ ಸಂದಿಗ್ಧತೆಯನ್ನು ಹಲವು ಲೇಖಕಿಯರು ತಮ್ಮ ಬರವಣಿಗೆಯ ಮೂಲಕ ತೆರೆದಿಡಲು ಪ್ರಯತ್ನಿಸಿದ್ದಾರೆ. "ಹೆಂಗಸರೆಲ್ಲರೂ ತಾಯಿಯರಾಗಲು ಹಂಬಲಿಸುವವರೆಂಬುದು ನಿಜವೆ ? ಅಥವಾ ತಾಯಿಯಾಗದ ಹೆಂಗಸಿನ ಜೀವನ ಹೇಗಿದ್ದರೂ ಅಪೂರ್ಣವೆ ? ತಾಯ್ತನಕ್ಕೆ ಬೇಕಾದ ಜೀವಪ್ರೀತಿ, ಜೀವನ ಶ್ರದ್ಧೆ, ಅಂತಃಕರಣಗಳು ನಮ್ಮ ಹೆಣ್ಣುಮಕ್ಕಳೊಂದಿಗೇ ಬಂದುಬಿಡುತ್ತವೆಯೇ ? ತಾಯ್ತನದ ಇಕ್ಕಟ್ಟು ಆಯಾಸ ಕ್ಲೇಶಗಳಿಂದ ಯಾರೂ ಯಾವತ್ತೂ ರೋಸಿಹೋಗಿಲ್ಲವೆ? ಬಹಳ ಜನಕ್ಕೆ ಒಂದು ಅನಿವಾರ್ಯದ ಜೈವಿಕ ಕ್ರಿಯೆಯಾಗಿ ಮಾತ್ರ ತಾಯ್ತನ ಬಂದಿದೆಯೇ? " (ವಿಜಯಾದಬ್ಬೆ, ನಾರಿ; ದಾರಿ-ದಿಗಂತ ಪು 5) ಎನ್ನುವ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನವನ್ನು ಇಲ್ಲಿ ಮಾಡಲಾಗುವುದು.

ತಾಯ್ತನ ಉದ್ಯೋಗದ ನಡುವಿನ ಸಂಘರ್ಷದ ದಾರಿಯನ್ನು ಲೇಖಕಿ ಚಿತ್ರಿಸಿದರೂ ಮೊದಲಿನೆರಡು ಕತೆಗಳಂತೆ ವಿರೋಧಿ ನಿಲುವಿಗೆ ಬರುವುದಿಲ್ಲ. ಅಡೆತಡೆಗಳನ್ನು ದಾಟ ಬದುಕನ್ನು

ಸುಸೂತ್ರವಾಗಿ ಸಾಗಿಸಲು ಎಷ್ಟೊಂದು ತಾಳ್ಮೆ ಸಹನೆ, ಮಾನಸಿಕ ಸ್ಥೈರ್ಯ ಬೇಕಾಗುತ್ತದೆನ್ನುವ ಕಡೆ ಗಮನ ಸೆಳೆಯುತ್ತಾರೆ. ಜೊತೆಗೆ ಗಂಡನ ಸಹಕಾರವೂ ಬೇಕಾಗುತ್ತದೆ ಎನ್ನುವ ಸೂಕ್ಷ್ಮವನ್ನು ಕತೆಯಲ್ಲಿ ಪ್ರತಿಪಾದಿಸುತ್ತಾರೆ.

ಗಂಡನ ಸಹಕಾರ ದೊರೆತಲ್ಲಿ ಹೆಂಗಸಿಗೆ ಮನೆಯನ್ನು ತೂಗಿಸಿಕೊಂಡು ಹೋಗುವುದಕ್ಕೆ ಉದ್ಯೋಗ ಅಡ್ಡಿಬರುವುದಿಲ್ಲ. ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳುವಂತಹ ಸಾರ್ವಜನಿಕ ಸಂಸ್ಥೆಗಳ ಕೊರತೆ ಈ ಸಮಸ್ಯೆಗೆ ಒಂದು ಕಾರಣ. ಶಾಂತಾದೇವಿ ಮಾಳವಾಡ ಅವರು 'ರಮಾ' ಕತೆಯಲ್ಲಿ ಇತ್ತ ಗಮನ ಸೆಳೆಯುತ್ತಾರೆ. ತಾಯಿಯ ಮನೆಯಿಂದ ಹೊರಗಿರುವಷ್ಟು ಸಮಯ ಮಕ್ಕಳನ್ನು ಕೆಲಸದವಳ ಬಳಿ ಬಿಟ್ಟು ಹೋಗುತ್ತಾಳೆ. ಮನೆ ಹಾಗೂ ಮಕ್ಕಳ ಬಗೆಗೆ ತಂದೆಗೆ ಯಾವುದೇ ಕಾಳಜಿ ಇರುವುದಿಲ್ಲ. ಹಾಗಾಗಿ, ಆಕೆ ಮಾನಸಿಕವಾಗಿ ತೊಳಲಾಡುತ್ತಾಳೆ. ಭಾರತೀಯ ಮಹಿಳೆಯರು ಎದುರಿಸುತ್ತಿರುವ ಈ ಸಮಸ್ಯೆಯ ಬಗೆಗೆ ಆಲೋಚಿಸುವ ಅವಳು ಹೊರದೇಶಗಳಲ್ಲಿ ದುಡಿಯುವ ಮಹಿಳೆಗೆ ಇಲ್ಲಿಗಿಂತ ಹೆಚ್ಚಿನ ಅನುಕೂಲಗಳು ಇರುತ್ತವೆಂದು, 'ಹೊಂದಿಕೊಂಡು ಹೋಗುವ ಮನಸ್ಸು ಇರುತ್ತದೆ' ಎಂದು ಯೋಚಿಸುತ್ತಾಳೆ. ಆದರೆ ಎಲ್ಲರ ಬದುಕಿನ ಸಂದರ್ಭದಲ್ಲಿಯೂ ಈ ಮಾತು ಸತ್ಯ ಎಂದು ತಿಳಿಯುವಂತಿಲ್ಲ. ದೂರದ ಬೆಟ್ಟ ನುಣ್ಣಗೆ ಕಾಣುವುದೇ ಹೆಚ್ಚು. ಅಮೆರಿಕಾದಲ್ಲಿ ಪ್ರಕಟವಾದ 'Second Shift ' ಪುಸ್ತಕದ ಶೀರ್ಷಿಕೆಯೇ ಸೂಚಿಸುವಂತೆ ಮಹಿಳೆಯು ಎರಡು ಪಾಳಿಗಳಲ್ಲಿ ದುಡಿಯಬೇಕಾಗಿರುವ ಪ್ರಸ್ತುತ ಪರಿಸ್ಥಿತಿಯ ಮೇಲೆ ಬೆಳಕು ಚೆಲ್ಲುತ್ತದೆ.

".... is taking paid work outside the home, masses of women live a life divided between two competing urgency systems two clashing rhythms of living, that of the family and the work place what the new scale at least, is child care for pay. the massive spread of the double day and struggle within marriage to equalize the load at home " (p.239). ಅಮೆರಿಕದಂತಹ ಅತ್ಯಂತ ಮುಂದುವರಿದ ದೇಶದಲ್ಲಿಯೂ ಮಹಿಳೆಯರ ಸಮಸ್ಯೆ ಭಾರತದ ಮಹಿಳೆಯರ ಸಮಸ್ಯೆಗಿಂತ ತೀರ ಭಿನ್ನವಲ್ಲ ಎನ್ನುವದನ್ನು ಈ ಮೇಲಿನ ಅಭಿಪ್ರಾಯ ತೆರೆದಿಡುತ್ತದೆ. ಕೆಲವು ಸಂಘ-ಸಂಸ್ಥೆಗಳು ಮಕ್ಕಳ ಜವಾಬ್ದಾರಿಯನ್ನು ಸಮಾಧಾನಕರ ರೀತಿಯಲ್ಲಿ ನಿಭಾಯಿಸುತ್ತದೆ ಎನ್ನವುದೇನೋ ನಿಜ. ಆದರೆ ಅದಕ್ಕೆ ವಿಧಿಸುವ ಶುಲ್ಕವನ್ನು ತೆರುವುದು ಸಾಮಾನ್ಯ ಜನರಿಗೆ ಭಾರವಾಗುತ್ತದೆ ಎನ್ನುವ ಅಭಿಪ್ರಾಯವೂ ಇದೆ.

ಉದ್ಯೋಗಸ್ಥ ಮಹಿಳೆಗೆ ಲಾಲನೆ-ಪಾಲನೆಗಳ ಜವಾಬ್ದಾರಿ ಇಂದು ಸಮಸ್ಯೆಯಾಗಿದೆ ಎನ್ನುವುದರ ಮೇಲೆ ಈ ಎಲ್ಲ ಕತೆಗಳ ಒತ್ತಿದೆ. ಒಂದು ಮಗು ಅಥವಾ ಎರಡು ಮಕ್ಕಳನ್ನು ಬೆಳೆಸುವುದಷ್ಟೇ ಈಗಿನ ಅಗತ್ಯವಾಗಿರುವುದರಿಂದ ಈ ಅವಧಿ ತೀರ ದೀರ್ಘವಲ್ಲ ನಿಜ. ಆದರೂ ದುಡಿಮೆಯ ಉತ್ಸಾಹದ ಸಮಯವನ್ನು ಇದು ಕಬಳಿಸುತ್ತದೆ ಎನ್ನವುದು ಆತಂಕದ ಸಂಗತಿ.

ಯಾವತ್ತೂ ತಾಯ್ತನವು ಮಹಿಳೆಯ ಆಯ್ಕೆಯಾಗಿಲ್ಲ. ಅವಳಿಗೆ ಇಷ್ಟವಿರಲಿ, ಇಲ್ಲದಿರಲಿ ಆಕೆ ತಾಯಿಯಾಗಲೇ ಬೇಕು. ಸಿ.ಎಸ್. ರಾಮು ಅವರು ಹೇಳುವಂತೆ "....marriage is not defined as means of satisfying personal needs but as the high road of motherhood, the ultimate expression of one's femininity..... of her many role (e.g.daughter, sister, wife, etc.), meternity is the essential source of respect and prestige on the part of kin and society. (Gender and Society in India Vol-I p 186) " ಮಹಿಳೆಯು ತಾಯಿಯಾಗದಿದ್ದಲ್ಲಿ ಬಂಜೆ ಎನಿಸಿಕೊಂಡು ಸಮಾಜದ ಕಣ್ಣಲ್ಲಿ ಅಪರಾಧಿಯಾಗುತ್ತಾಳೆ. ದೋಷವಿರುವುದು ಅವಳಲ್ಲಿಯೇ ಅಥವಾ ಗಂಡನಲ್ಲಿಯೇ ಎನ್ನವುದರ ಬಗೆಗೆ ಸಮಾಜವು ಎಂದೂ ವಿಚಾರ ಮಾಡಿದಂತೆ ಕಾಣುವುದಿಲ್ಲ. ಮಗು ಹೆರದಿದ್ದುದು ಅವಳದೇ ತಪ್ಪು ಎಂದು ಭಾವಿಸಲಾಗುತ್ತದೆ. ಮಗುವಿಗಾಗಿ ಗಂಡಸು ಎಷ್ಟು ಮದುವೆಯನ್ನಾದರೂ ಮಾಡಿಕೊಳ್ಳಬಹುದು. ಆಗಲೂ ಮಗುವಾಗದಿದ್ದರೆ ದಶರಥ ಮಹಾರಾಜನಂತೆ ಪುತ್ರ ಕಾಮೇಷ್ಠಿ (ಧಾರ್ಮಿಕ ವಿಧಿ ವಿಧಾನಗಳು) ಮೊರೆಹೋಗಬಹುದು. ಪುರಾಣ ಕಾವ್ಯಗಳ ಕಾಲದಿಂದ ಆಧುನಿಕ ಕಾಲದವರೆಗೆ (ಇತ್ತೀಚಿನ ವರ್ಷಗಳಲ್ಲಿ ಕೇರಳದಲ್ಲಿ ನಡೆದ ಯಾಗ) ಇದಕ್ಕೆ ಸಾಕಷ್ಟು ಪುರಾವೆಗಳು ದೊರಕುತ್ತವೆ. ಬಂಜೆತನದಿಂದ ಬಿಡುಗಡೆ ಪಡೆಯಲು, ಗಂಡನ ಪ್ರೀತಿಯನ್ನು ಇನ್ನೊಬ್ಬಳೊಂದಿಗೆ ಹಂಚಿಕೊಳ್ಳುವುದನ್ನು ತಪ್ಪಿಸಿಕೊಳ್ಳಲು ಕೆಲವು ಮಹಿಳೆಯರು ಒಳದಾರಿಗಳನ್ನು ಕಂಡುಕೊಳ್ಳುವ ಸಾಹಸಕ್ಕೆ ಮುಂದಾದದ್ದಿದೆ. ತಮ್ಮ ಯಾವುದೇ ದೋಷವಿಲ್ಲದೆ ಬಂಜೆತನ ಅಭಿಶಾಪಕ್ಕೆ ತುತ್ತಾದಾಗ ಮಹಿಳೆಯು ಯಾವ ನಿರ್ಣಯಕ್ಕೆ ಬರಬಲ್ಲಳೆನ್ನುವುದನ್ನು ಕೆಲವು ಕಥಾನಕಗಳು ಬಿಚ್ಚಿಡುತ್ತವೆ.

ಗಂಡನ ದೋಷದಿಂದ ಮಗುವಾಗದಿದ್ದ ಸನ್ನಿವೇಶದಲ್ಲಿ

ಅದನ್ನು ಹೆಂಡತಿಯದೇ ದೋಷ ಎನ್ನವಂತೆ ವರ್ತಿಸಬಹುದು. ಆಧುನಿಕ ವಿಜ್ಞಾನದ ಮೊರೆಹೋಗಬಹುದು. ಒಟ್ಟಿನಲ್ಲಿ ಸಮಾಜದೆದುರು ತನ್ನ ಪುರುಷತ್ವವನ್ನು ಸಾಬೀತುಗೊಳಿಸಲು ಬೇಕಾದ ಯಾವುದೇ ಹುನ್ನಾರವನ್ನು ಮಾಡಲೂ ಸಿದ್ಧವಿರುತ್ತಾನೆ. ತನ್ನ ಈ ಕಾರ್ಯವು ಹೆಂಡತಿಯ ಮೇಲೆ ಯಾವ ಪರಿಣಾಮ ಬೀರಬಹುದೆನ್ನುವ ಕಡೆ ಆತನ ಗಮನ ಹರಿಯುವುದು ತೀರ ವಿರಳ. ಹೆಂಗಸಿನ ವಿಷಯದಲ್ಲಿ ತಾಯ್ತನವನ್ನು ಒಂದು ಮೌಲ್ಯವಾಗಿ ಅವಳ ಮೇಲೆ ಹೇರಿರುವ ಸಮಾಜವು ಗಂಡಸಿನ 'ತಂದೆತನ' ಕುರಿತಂತೆ ಯಾವ ಒತ್ತಡವನ್ನೂ ಹೇರುವುದಿಲ್ಲ. ಆತನ ವಂಶದ ಮುಂದುವರಿಕೆಗೆ ವಾರಸುದಾರ ಬೇಕೆಂದು ಮಾತ್ರ ಬಯಸುತ್ತದೆ. ಹೆಂಗಸಿನಂತೆ ಕರುಳ ಬಳ್ಳಿಯ ಭಾವನಾತ್ಮಕ ಸಂಬಂಧಕ್ಕಿಂತ ವಾರಸುದಾರತ್ವದ ವ್ಯಾವಹಾರಿಕ ಸಂಬಂಧವೇ ಇಲ್ಲಿ ಮುಖ್ಯವಾಗುತ್ತದೆ. ಅದರ ಪೂರೈಕೆಗಾಗಿ ಮಹಿಳೆಯನ್ನು ಉಪಕರಣವಾಗಿ ಬಳಸುತ್ತ ಬರಲಾಗಿದೆ. ಅಂದರೆ ಮಹಿಳೆಯ ಪ್ರಜನನತತ್ವವನ್ನು ಪುರುಷ ಪ್ರತಿಷ್ಠೆಯ ಸಂಕೇತವಾಗಷ್ಟೇ ಕಾಣಲಾಗುತ್ತಿದೆ. ವಂಶದ ಮುಂದುವರಿಕೆಗೆ ಮಗು ಬೇಕೇಬೇಕು ಎಂದು ಯೋಚಿಸಿದ ಗಂಡ ಆತನಲ್ಲಿ ದೋಷವಿದ್ದುದರಿಂದ ಆಧುನಿಕ ವಿಜ್ಞಾನದಸಹಾಯದಿಂದ ಮಗುವನ್ನು ಪಡೆಯಲು ಸಿದ್ಧನಾದುದನ್ನು ಶಾಂತಾದೇವಿ ಕಣವಿಯವರ 'ತಾಯ್ತನ' (ಬಯಲು ಆಲಯ) ಕತೆ ಕಂಡರಿಸುತ್ತದೆ. ಹುಟ್ಟಿನಿಂದಲೇ ಹೆಣ್ಣಿಗೆ ಪಾತಿವ್ರತ್ಯದ ಪಾಠ ಬೋಧಿಸುವ ಪರಿಸರದಲ್ಲಿ ಗಂಡನ ಹೊರತಾಗಿ ಅನ್ಯರ ವೀರ್ಯದಿಂದ ಬಸಿರನ್ನು ಹೊತ್ತ ಮಹಿಳೆಯ ತಳಮಳ ಯಾವ ಬಗೆಯಲ್ಲಿರಬಹುದು ಎನ್ನುವುದನ್ನು ಈ ಕತೆ ಅನಾವರಣಗೊಳಿಸುತ್ತದೆ. ಗರ್ಭಿಣಿಯಾದವಳಿಗೆ ಹುಟ್ಟಲಿರುವ ತನ್ನ ಮಗುವಿನ ಬಗೆಗೆ ಸಹಜವಾಗಿ ಇರಬೇಕಾದ ವಾತ್ಸಲ್ಯ ಭಾವನೆ ಪಾರ್ವತಿಯಲ್ಲಿ ಮೂಡುವುದೇ ಇಲ್ಲ. ಅವಳಿಗಿದ್ದುದು ಬರೀ ಕುತೂಹಲ. 'ಈ ಕಂದನ ಕಾಣದ ಜನ್ಮದಾತನ ಭೂತ ತನ್ನನ್ನು ಕಾಡುತ್ತಿದೆ. ಆ ಭಯ ತನ್ನ ಪ್ರೀತಿಯ ಕತ್ತು ಹಿಚುಕುತ್ತಿದೆ. ತನ್ನನ್ನು ಹೋಲದೆ ಅವರನ್ನು ಹೋಲದೆ ಬೇರೆ ಯಾವುದೋ ಒಂದು ರೂಪವನ್ನು ಹೊರಬಹುದಾದ ಮಗು ತನ್ನ ಹೊಟ್ಟೆಗೆ ಭಾರವಾಗುತ್ತಿದೆ,' (ಪು 151) ಎನ್ನುವ ಪಾರ್ವತಿಯ ಆಲೋಚನೆ ಅವಳ ಇಚ್ಛೆಗೆ ವಿರುದ್ಧವಾಗಿ ಅವಳ ಮೇಲೆ ತಾಯ್ತನವನ್ನು ಹೇರಲಾಗಿದೆ ಎನ್ನುವುದನ್ನು ತೆರೆದಿಡುತ್ತದೆ.

ಸಂತಾನಾಪೇಕ್ಷೆಯನ್ನು ಪೂರೈಸಲು ಗಂಡನ ಒಪ್ಪಿಗೆ ಪಡೆದು ಹೆಂಡತಿ ಅನ್ಯವ್ಯಕ್ತಿಯಿಂದ ಗರ್ಭಧಾರಣೆ ಮಾಡಿಸಿಕೊಳ್ಳುವುದನ್ನು (ನಿಯೋಗ) ಪ್ರಾಚೀನ ಸಮಾಜವು ಆಪದ್ಧರ್ಮವೆಂದು ಸ್ವೀಕರಿಸಿತ್ತು. ವಂಶ ಮುಂದುವರಿಕೆಯ ಅನಿವಾರ್ಯತೆಯಿದ್ದಲ್ಲಿ ವಿಧವೆಯರೂ ನಿಯೋಗದಿಂದ ಮಗುವನ್ನು ಪಡೆಯಬಹುದಿತ್ತು. ಇಂತಹ ನಿಯೋಗಕ್ಕೆ ಸಾಕಷ್ಟು ಷರತ್ತುಗಳಿದ್ದವು. ಈ ಪದ್ಧತಿಯನ್ನು ಮಹಿಳೆಗೆ ನೀಡಿದ ಸ್ವಾತಂತ್ರ್ಯವೆಂದೋ, ಅವಳ ತಾಯ್ತನದ ತೃಪ್ತಿಗಾಗಿ ಸಮಾಜವು ಕಲ್ಪಿಸಿದ್ದ ಅವಕಾಶವೆಂದೋ ತಿಳಿಯುವಂತಿಲ್ಲ. ಗಂಡನ ಆಸ್ತಿಗೆ ವಾರಸುದಾರನನ್ನು ಹೆರುವ ವ್ಯಕ್ತಿಯಾಗಿ ಮಾತ್ರ ಅವಳನ್ನು ಬಳಸಿಕೊಳ್ಳಲಾಗುತ್ತಿತ್ತು. ಇಲ್ಲಿ ಅವಳ ಇಷ್ಟಾನಿಷ್ಟಗಳು ಗಣನೆಗೆ ಬರುತ್ತಿರಲಿಲ್ಲ. ಅವಳ ಲೈಂಗಿಕತೆಯು ಪುರುಷಾಧೀನವಾಗಿಯೇ ಇತ್ತು.

ಮಹಾಭಾರತದ ಕಾಲಕ್ಕಾಗಲೇ ಸಮಾಜದಲ್ಲಿ ನಿಯೋಗ ಪದ್ಧತಿಯ ಬಗೆಗೆ ಸದಭಿಪ್ರಾಯವಿದ್ದಂತೆ ಕಾಣುವುದಿಲ್ಲ. ಪಾಂಡವರು ಬದುಕಿನುದ್ದಕ್ಕೂ ಅವರ ವಂಶದ ಬಗೆಗೆ ಇತರರ ಹೀಯಾಳಿಸುವಿಕೆಗೆ ಬಲಿಯಾದುದನ್ನು ನೆನೆಯಬಹುದು. ಮಹಿಳೆಯ ಮೇಲೆ ಪಾತ್ರಿವ್ರತ್ಯದ ಬಿಗಿತಗಳು ಹೆಚ್ಚಾದಂತೆಲ್ಲ ಆತನ ಬಂಜೆತನಕ್ಕೂ ಆಕೆಯೇ ಬಲಿಪಶುವಾಗಿ ಈ ಸಮಸ್ಯೆಯು ಅಪರಿಹಾರ್ಯವಾಗಿ ಉಳಿಯಿತು. ಗಂಡನ ದೈಹಿಕ ದೋಷದ ಕಾರಣದಿಂದ ಹೆಂಡತಿಯರು ಬಂಜೆ ಎನ್ನುವ ಮೂದಲಿಕೆಗೆ ಗುರಿಯಾದಾಗ ಕೆಲವರಾದರೂ ತಮ್ಮದೇ ಆದ ಮಾರ್ಗಗಳನ್ನು ಕಂಡುಕೊಂಡದ್ದಿದೆ. ಶಾಂತಾದೇವಿ ಕಣವಿಯವರ 'ತೆಪ್ಪೋತ್ಸವ' (ಜಾತ್ರೆ ಮುಗಿದಿತು) ಗೀತಾ ನಾಗಭೂಷಣರ 'ಗೌಡನಗೋರಿ' (ಜ್ವಲಂತ) ಕತೆಗಳ ನಾಯಕಿಯರು ಕಂಡುಕೊಂಡ ಪರಿಹಾರ ನಿಯೋಗದ ರೀತಿಯದೇ. ಆದರೆ ಇಲ್ಲಿ ಗಂಡನ ಅರಿವಿಗೆ ಬಾರದಂತೆ ಅವರು ತಮ್ಮ ತಾಯ್ತನದ ಆಕಾಂಕ್ಷೆಯನ್ನು ಪೂರೈಸಿಕೊಳ್ಳುತ್ತಾರೆ. ಗಂಡಸಿನ ಬಂಜೆತನವನ್ನು ಮುಚ್ಚಿಡುವ ವ್ಯವಸ್ಥೆಯು ಅವರಿಗೆ ಅನುಕೂಲವಾಗಿ ಪರಿಣಮಿಸುತ್ತದೆ. ತೆಪ್ಪೋತ್ಸವದ ಕೆಂಪಮ್ಮನ ಗಂಡನಿಗೆ ಅವನ ಬಂಜೆತನದ ಅರಿವಿರುವುದಿಲ್ಲ. ಗೌಡನಗೋರಿಯ ಗೌಡನಿಗೆ ತನ್ನ 'ಫಲಹೀನತೆ' ಗೊತ್ತಿರುತ್ತದೆ. ಮೊದಲ ಕತೆಯಲ್ಲಿ ಬಂಜೆತನದ ಅನಾವರಣ ಲೇಖಕಿಯ ಉದ್ದೇಶವಾಗಿದ್ದರೆ, ಎರಡನೆಯ ಕತೆಯಲ್ಲಿ ತನ್ನ ಮೇಲಿನ ಅಪವಾದವನ್ನು ಕಳೆದುಕೊಳ್ಳಲು ಹೆಂಗಸು ಆಯ್ದುಕೊಂಡ ದಾರಿಯನ್ನು ತಿಳಿಸುವುದಾಗಿದೆ. ಇಲ್ಲಿ ಗಂಡನಿಗೆ ಇದು ಗೊತ್ತಾಗುತ್ತದೆಯಾದರೂ ತನ್ನ 'ಪುರುಷತ್ವ'ದ ಸಂಕೇತವೆಂದು ಹೆಂಡತಿಯ ತಾಯ್ತನವನ್ನು 'ಜಾಣ ಕಿವುಡಿ'ನಿಂದ ಸ್ವೀಕರಿಸುತ್ತಾನೆ. ತನ್ನ ಪಿತೃತ್ವದ ನಿರಾಕರಣೆ ತನಗೇ ಅವಮಾನವೆಂದು ತಿಳಿಯುವ ಗೌಡ ಸಾಯುವ ಹೊತ್ತಿನಲ್ಲಿ ಹೆಂಡತಿಯ ಗುಟ್ಟು ತನಗೆ ಗೊತ್ತಿರುವುದಾಗಿ ಹೇಳಿ ಸಾಯುತ್ತಾನೆ. ಆದರೆ ಸಮಾಜದೆದುರು ಹೆಂಡತಿಯ ಪಾತಿವ್ರತ್ಯ ಸುರಕ್ಷಿತವಾಗಿಯೇ ಉಳಿಯುತ್ತದೆ.

ತಾಯ್ತನಕ್ಕೆ ಮಾನ್ಯತೆ ಇರುವುದು ವೈವಾಹಿಕ ಪರಿಧಿಯೊಳಗೆ ಮಾತ್ರ. ಇದಕ್ಕೆ ಹೊರತಾದ ತಾಯ್ತನವನ್ನು ಬಯಸಿದರೆ

ಸುಂದರ ಕರ್ನಾಟಕಕ್ಕೆ
ಸುವರ್ಣ ಮಹೋತ್ಸವ

ಸುಮಾರು 2000 ವರ್ಷಗಳ ಇತಿಹಾಸ ಕನ್ನಡಿಗರದು. ನಾನಾ ಕಾರಣಗಳಿಂದಾಗಿ ಬೇರೆ ಬೇರೆ ಭಾಗಗಳಲ್ಲಿ ಚದುರಿ ಹೋಗಿದ್ದ ಕನ್ನಡಿಗರು ಮತ್ತೆ ನವೆಂಬರ್ 1, 1986 ರಂದು ಒಂದಾದರು. ಇದು ಏಕೀಕೃತ ಕರ್ನಾಟಕ ಉದಯವಾದ ಸುದಿನ. ಈ ಸಾಧನೆಗಾಗಿ ಆಲೂರು ವೆಂಕಟರಾಯರಾದಿಯಾಗಿ ಅಸಂಖ್ಯಾತ ಸಾಹಿತಿಗಳು, ಕಲಾವಿದರು ಮತ್ತು ವಿವಿಧ ರಂಗಗಳ ಗಣ್ಯರು ಹಾಗೂ ಜನಸಮುದಾಯದ ಪರಿಶ್ರಮ ಮತ್ತು ತ್ಯಾಗವಿದೆ. ಇವರೆಲ್ಲರಿಗೂ ಇಂದು ನಮ್ಮ ನಮನ.

ಕರ್ನಾಟಕ – 50 ವರ್ಷಗಳ ಒಂದು ಅವಲೋಕನ

- ಸರ್ಕಾರದ ಆಡಳಿತ ನಿರ್ವಹಣೆಗಾಗಿ ವಿನೂತನ ಶೈಲಿಯ ವಿಧಾನಸೌಧದ ನಿರ್ಮಾಣ.
- ''ಉಳುವವನಿಗೆ ಭೂಮಿ'' ಕಾಯಿದೆಯನ್ನು ಜಾರಿಗೊಳಿಸಿದ ಭಾರತದ ಮೊದಲ ರಾಜ್ಯ.
- ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಪ್ರತ್ಯೇಕ ಆಯೋಗ ರಚಿಸಿ, ರಾಷ್ಟ್ರಕ್ಕೆ ಮಾದರಿಯಾದ ರಾಜ್ಯ.
- ಆಡಳಿತ ವಿಕೇಂದ್ರೀಕರಣದ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಯಶಸ್ವಿಯಾಗಿ ಜಾರಿಗೆ ತಂದ ಮೊಟ್ಟ ಮೊದಲ ಮಾದರಿ ರಾಜ್ಯ.
- ಸಾಕ್ಷರತೆಯಲ್ಲಿ ಗಣನೀಯ ಸಾಧನೆ - ಕೇವಲ ಶೇ.24 ರಷ್ಟಿದ್ದ ಸಾಕ್ಷರತೆ ಈಗ ಶೇ.71 ಕ್ಕೆ ಏರಿಕೆ.
- ಮಹಿಳೆಯರಿಗೆ ಉದ್ಯೋಗ ಮತ್ತು ಆಡಳಿತದಲ್ಲಿ ಮೀಸಲಾತಿ.
- ನೀರಾವರಿ ಸಾಮರ್ಥ್ಯ - 23.84 ಲಕ್ಷ ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ.
- ವಿಶ್ವ ಸಂಸ್ಥೆಯ ಪ್ರಶಂಸೆ ಮತ್ತು ಪ್ರಶಸ್ತಿಗೆ ಪಾತ್ರವಾದ ''ಭೂಮಿ'' ಯೋಜನೆಯಡಿ ರೈತರಿಗೆ ಕಂಪ್ಯೂಟರ್ ಮೂಲಕ ಪಹಣಿ ವಿತರಿಸಿದ ಪ್ರಪ್ರಥಮ ರಾಜ್ಯ.
- ಮಾಹಿತಿ ತಂತ್ರಜ್ಞಾನದಲ್ಲಿ ಇಡೀ ರಾಷ್ಟ್ರದಲ್ಲಿ ಪ್ರಥಮ ಸ್ಥಾನ ಪಡೆದ ರಾಜ್ಯ.

ಕರ್ನಾಟಕ ಸುವರ್ಣ ಮಹೋತ್ಸವದ ಈ ಶುಭ ಸಂದರ್ಭದಲ್ಲಿ ನಮ್ಮ ನಾಡಿಗೆ ಅಪೂರ್ವ ಸಂಸ್ಕೃತಿ ಮತ್ತು ಭವ್ಯ ಪರಂಪರೆಯನ್ನು ಎತ್ತಿ ಹಿಡಿಯೋಣ. ಅದರ ಉಜ್ವಲ ಬೆಳಕಿನಲ್ಲಿ ರಾಜ್ಯದ ಭವ್ಯ ಭವಿಷ್ಯವನ್ನು ರೂಪಿಸಲು ಕಂಕಣಬದ್ಧರಾಗೋಣ.

ಕರ್ನಾಟಕ ವಾರ್ತೆ
Karnataka Information

ಸಮಾಜವು ಅಂತಹ ಮಹಿಳೆಯನ್ನು ಅತ್ಯಂತ ಕೀಳಾಗಿ ಕಾಣುತ್ತದೆ. ಆ ಸಂತಾನವನ್ನು ನಿಕೃಷ್ಟವಾಗಿ ನಡೆಸಿಕೊಳ್ಳುತ್ತದೆ. ಆದಾಗ್ಯೂ, ಒಂದು ಕಾಲಕ್ಕೆ ಅವಿವಾಹಿತ ತಾಯ್ತನವು ಕೆಲಮಟ್ಟಿಗೆ ಪ್ರಚಲಿತವಾಗಿತ್ತು , ಎನ್ನುವುದಕ್ಕೆ 'ಕಾನೀನ' ಎಂಬ ಪದ ಸಾಕ್ಷಿಯೊದಗಿಸುತ್ತದೆ. ಸತ್ಯಕಾಮ, ಕರ್ಣರ ಹುಟ್ಟು ಉದಾಹರಣೆಯಾಗುತ್ತದೆ. ಕುತೂಹಲಕ್ಕಾಗಿ ಕರ್ಣನನ್ನು ಪಡೆದ ಕುಂತಿ ಹುಟ್ಟಿದ ಮಗುವನ್ನು ಗಂಗೆಯಲ್ಲಿ ತೇಲಿಬಿಟ್ಟಳೆಂದರೆ ಮಹಾಭಾರತದ ಕಾಲಕ್ಕಾಗಲೇ ಸಮಾಜವು ಇದನ್ನು ಮಾನ್ಯ ಮಾಡುತ್ತಿರಲಿಲ್ಲವೆಂದೇ ಅರ್ಥೈಸಬೇಕಾಗುತ್ತದೆ. ಮಹಿಳೆಯ ತಾಯ್ತನದ ಹಕ್ಕು ಎಂದಿನಿಂದಲೂ ಆಕೆಯದಾಗಿರದೆ ಸಮಾಜದ್ದಾಗಿತ್ತು. ತಾಯ್ತನದ ಎಲ್ಲ ಬವಣೆಯನ್ನು ಅನುಭವಿಸುವ ಮಹಿಳೆಗೆ ಆಯ್ಕೆಯ ಸ್ವಾತಂತ್ರ್ಯ ತನ್ನದಲ್ಲ ಎನ್ನುವ ಅರಿವುಂಟಾದಾಗ ತನ್ನ ಹಕ್ಕನ್ನು ಸ್ಥಾಪಿಸುವ ಅಗತ್ಯ ಕಂಡು ಬಂದುದರ ಫಲವಾಗಿ ಕೆಲವು ಕೃತಿಗಳು ರಚಿತವಾದವು.

ಹಿರಿಯ ಲೇಖಕಿ ಎಚ್.ಎಸ್. ಸಾವಿತ್ರಮ್ಮನವರಿಂದ ಎಂ.ಎಸ್. ವೇದಾ ಅವರವರೆಗೆ ವಿವಿಧ ತಲೆಮಾರಿಗೆ ಸೇರಿದ ಲೇಖಕಿಯರು ಸ್ಥಾಪಿದ ಮೌಲ್ಯವನ್ನು ತಿರಸ್ಕರಿಸಿ ತಾಯ್ತನದ ಸಂಪೂರ್ಣ ಹಕ್ಕು ಮಹಿಳೆಯದು ಎನ್ನವುದನ್ನು ಪ್ರತಿಪಾದಿಸಲು ಪ್ರಯತ್ನಿಸಿದ್ದಾರೆ.

ಸಾವಿತ್ರಮ್ಮನವರ 'ಸುಪ್ತಬಯಕೆ' (ಪ್ರತೀಕ್ಷೆ) ಕತೆಯ ಸೀತೆ ಲಂಡನ್ನಿನಲ್ಲಿ ಮಗುವನ್ನು ಹೆತ್ತು ದೇಶಕ್ಕೆ ವಾಪಸ್ಸಾಗುತ್ತಾಳೆ. ಅವಿವಾಹಿತ ತಾಯಾದ ಸೀತೆ 'ಮದುವೆ ಆಗದಿದ್ದರೆ ಮಕ್ಕಳಾಗಬಾರದೇನೇ ' ಎಂದು ತಂಗಿ ರಮೆಯನ್ನು ಪ್ರಶ್ನಿಸುತ್ತಾಳಾದರೂ ಸಮಾಜಕ್ಕೆ ಹೆದರಿದ ರಮೆ ಮಗುವಿನ ತಂದೆ ತೀರಿಹೋಗಿರುವುದಾಗಿ ಕತೆ ಕಟ್ಟುತ್ತಾಳೆ. ದೂರದ ನಾಡಿನಲ್ಲಿನ ಸೀತೆಯ ಹೆರುವಿಕೆ ಹಾಗೂ ರಮೆ ಇತರರನ್ನು ನಂಬಿಸಲು ಹೇಳುವ ಕಟ್ಟುಕತೆಗಳು ಮಹಿಳೆಯರಿಗೆ ಸಮಾಜದ ಬಗೆಗಿರುವ ಅಂಜಿಕೆಯನ್ನು ಸೂಚಿಸುತ್ತದೆ. ಆ ಮಗುವಿನ ತಂದೆಯಾದವನ ಎದುರಿನಲ್ಲಿ ಬಾಳುವ ಸೀತೆಯ ಧೈರ್ಯ ಅಸಾಧಾರಣವಾದುದು. ಮಗುವನ್ನು ಪಡೆಯಬೇಕೆಂದು ಅವಳು ಬಯಸಿರಲಿಲ್ಲ. ಆದ ಮಗುವನ್ನು ನಿರಾಕರಿಸದೆ ಬೆಳೆಸುವ ಧೈರ್ಯ ಮಾಡುತ್ತಾಳೆ. ಸೀತೆಯಂತೆಯೇ ಅನಿರೀಕ್ಷಿತವಾಗಿ 'ತಾಯ್ತನ 'ವನ್ನು ಸ್ವೀಕರಿಸಿದವಳು ಗೀತಾ ನಾಗಭೂಷಣರ 'ಧುಮ್ಮಸು ' ಕಾದಂಬರಿಯ ನಾಯಕಿ ಸೋನಿ. ನಿಶ್ಚಯವಾಗಿದ್ದ ಗಂಡು ಮಲ್ಲೇಶಿ ಅಪಘಾತದಲ್ಲಿ ಸತ್ತುಹೋದ ಆಘಾತವನ್ನು ಮರೆಯಬೇಕೆಂದುಕೊಳ್ಳುವ ಪೂರ್ವದಲ್ಲಿಯೇ ಅವನ ಅಂಶ ತನ್ನ ಗರ್ಭದಲ್ಲಿ ಬೆಳೆಯುತ್ತಿರುವ ಸಂಗತಿ ಗೊತ್ತಾಗುತ್ತದೆ. ಎಷ್ಟೇ ಒತ್ತಡ ಹೇರಿದರೂ ಸೋನಿ ಅದನ್ನು ತೆಗೆಸಲು ಒಪ್ಪುವುದಿಲ್ಲ. ಊರಲ್ಲಿ ಪಂಚಾಯಿತಿ ನಡೆದು ಅವಳು ಹಾದರದ ಬಸಿರು ತೆಗೆಸಲು ಒಪ್ಪದ್ದರಿಂದ ಊರುಬಿಟ್ಟು ಹೋಗಬೇಕೆಂದೂ, ಸಾವಿರ ರೂಪಾಯಿ ದಂಡ ತೆತ್ತರೆ ಅವಳ ಅಪ್ಪ ಊರಲ್ಲಿರಬಹುದೆಂದು ಊರ ಮುಖಂಡರು 'ಫತ್ವಾ' ಹೊರಡಿಸುತ್ತಾರೆ. ಇದರಿಂದ ಅವಮಾನಿತನಾದ ಅವಳ ಅಪ್ಪ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಊರುಬಿಟ್ಟು ಹೋಗುವ ಸೋನಿ ಮಲ್ಲೇಶಿಯ ಸ್ನೇಹಿತರ ಸಹಾಯದಿಂದ ನಗರದ ಝೋಪಡಿ ಪಟ್ಟಿ ಸೇರಿ ಕೂಲಿಮಾಡಿ ಬದುಕುತ್ತಾಳೆ. ಹಳ್ಳಿಯವರ ತಾರತಮ್ಯದ ಕಾನೂನಿನ ಪರಿಧಿಯಿಂದ ಹೊರಗಡೆ ಮಗುವನ್ನು ಬೆಳೆಸಬೇಕೆಂಬ ಸಂಕಲ್ಪದಂತೆ ಮಗುವನ್ನು ಸಾಕುತ್ತಾಳೆ. ಧುಮ್ಮಸ್ಸಿನ ಹೊಡೆತ ಬಿದ್ದಂತೆ ನೆಲ ಗಟ್ಟಿಯಾಗುವಂತೆ ಬಾಳಿನಲ್ಲಿ ಎದುರಾಗುವ ಆಘಾತಗಳಿಂದ ವ್ಯಕ್ತಿತ್ವ ಗಟ್ಟಿಯಾಗುತ್ತದೆನ್ನುವ ನಂಬಿಕೆ ಸೋನಿಯದು. ತುಡುಗು ದನದಂತೆ ಬೇಕಾದಲ್ಲಿ ಮೇಯುವ ಮೇಲುಜಾತಿಯ ಗಂಡಸರಿಗೆ ಸೊಪ್ಪು ಹಾಕದ ತಾಯ್ತನವನ್ನು ಉಳಿಸಿಕೊಳ್ಳಲು ಯಾವುದೇ ಕಷ್ಟಕ್ಕೂ ಹೆದರದ ಗಟ್ಟಿತನ ಸೋನಿಯದು. ಯಾವ ಸ್ಥಿರಾಸ್ತಿಯೂ ಇಲ್ಲದೆ ರಟ್ಟೆಯನ್ನೇ ನಂಬಿ ಬದುಕುವ ಜೀವಗಳು ಮೇಲಿಂದ ಹೇರುವ ಮೌಲ್ಯಗಳನ್ನು ತಿರಸ್ಕರಿಸಿ ಬದುಕುವ ಕೆಚ್ಚನ್ನು ತೋರಲು ಸಾಧ್ಯ ಎನ್ನುವುದಕ್ಕೆ ಸೋನಿಯ ಬದುಕು ಉದಾಹರಣೆಯಾಗುತ್ತದೆ. ಮಾನವೀಯ ಅನುಕಂಪವು ಧರ್ಮ, ಜಾತಿಗಳೆಂಬ ಎಲ್ಲೆಯನ್ನು ಮೀರಿದ್ದು ಎನ್ನುವುದನ್ನು ಸಲೀಮ ಮತ್ತು ಪಾಶುಮಿಯಾರ ನಡವಳಿಕೆಗಳು ತೋರಿಸಿಕೊಡುತ್ತವೆ. ಹಳ್ಳಿಯ ಸೀಮಿತ ಆವರಣಕ್ಕಿಂತ ನಗರದ ವಿಶಾಲ ಪರಿಸರದಲ್ಲಿ, ಮನುಷ್ಯರು ಅಪರಿಚಿತರಾದಂತೆಲ್ಲ ಈ ಬಗೆಯ ಶೋಷಣೆಯ ಮೊನಚು ಕಡಿಮೆಯಾಗುತ್ತದೆ. ಹಳ್ಳಿಯ ಉಸಿರುಗಟ್ಟಿಸುವ ವಾತಾವರಣಕ್ಕಿಂತ ನಗರದ ಬಿಡುವಿಲ್ಲದ ಕೊಂಪೆಯ ಬದುಕೇ ಎಷ್ಟೋ ಮೇಲು ಎನ್ನುವುದಾಗಿ ಕತೆ ನಂಬುತ್ತದೆ. ಆದ್ದರಿಂದಾಗಿ ಅವಿವಾಹಿತ ತಾಯ್ತನವನ್ನು ಭರಿಸಲು ಸೋನಿಗೆ ಸಾಧ್ಯವಾಗುತ್ತದೆ.

ಮಕ್ಕಳನ್ನು ಕುರಿತ ಆಸಕ್ತಿ ಎಲ್ಲ ಮಹಿಳೆಯರಲ್ಲಿಯೂ ಒಂದೇ ಬಗೆಯಲ್ಲಿರುತ್ತದೆ ಎನ್ನವಂತೆ ತಾಯ್ತನಕ್ಕೆ ಬಹಳ ಆದ್ಯತೆ ನೀಡಲಾಗಿದೆ. ಕೆಲವರಿಗೆ ತಾಯ್ತನ ವೈವಾಹಿಕ ಬದುಕಿನ ಒಂದು ಅಂಗವಾಗಿ ಮಾತ್ರ ಕಾಣಿಸಬಹುದು. ಇನ್ನು ಕೆಲವರಿಗೆ

ತಾಯಿಯಾಗಲೇ ಬೇಕು, ತನ್ನ ರಕ್ತ ಮಾಂಸ ಹಂಚಿಕೊಂಡ ಮಗು ಬೇಕೇಬೇಕೆಂಬ ತೀವ್ರ ತುಡಿತವೂ ಇರಬಹುದು. ಅವಳ ಒಳಗಿನಿಂದ ಇಂತಹ ಭಾವನೆ ಪುಟಿದಾಗ ವೈವಾಹಿಕ ಸ್ಥಿತಿ ಅಪ್ರಸ್ತುತವಾಗಿ ಮಗುವನ್ನು ಪಡೆಯುವ ತನ್ನ ಹಕ್ಕನ್ನು ಚಲಾಯಿಸುವುದು ಅವಳಿಗೆ ಮುಖ್ಯವಾಗುತ್ತದೆ. ತಾಯಿಯ ಹೆಸರಿನಿಂದಲೂ ಮಗುವನ್ನು ಶಾಲೆಗೆ ಸೇರಿಸಲು ಅವಕಾಶವಿರಬೇಕು. ಎಲ್ಲೆಲ್ಲಿ ತಂದೆಯ ಹೆಸರಿನ ಅಗತ್ಯವಿರುತ್ತದೆಯೋ ಅಲ್ಲೆಲ್ಲಾ ಕಡೆ ತಾಯಿಯ ಹೆಸರನ್ನು ಬಳಸಲು ಅನುವು ಮಾಡಿಕೊಡಬೇಕೆನ್ನುವ ಮಹಿಳೆಯರ ಹಲವು ವರ್ಷಗಳ ಬೇಡಿಕೆಯನ್ನು ಸರಕಾರ ಒಪ್ಪಿ ಅದಕ್ಕೆ ಕಾನೂನಿನ ಮುದ್ರೆ ಬಿದ್ದಿದೆ. ಸಾಮಾಜಿಕವಾಗಿ 'ಆಧುನಿಕ ಕುಂತಿ ' ಯೆಂದು ಅಪಹಾಸ್ಯ ಮಾಡುವ ಪರಿಸ್ಥಿತಿಯಿದ್ದರೂ ಮಹಿಳೆಗೆ ಆ ಹಕ್ಕು ಇರಬೇಕೆಂದು ಪ್ರತಿಪಾದಿಸುವಂತಹ ಹಲವು ಕೃತಿಗಳು ರೂಪುಗೊಂಡಿವೆ. ಈ ದಿಶೆಯಲ್ಲಿ ಎಪ್ಪತ್ತರ ದಶಕದಲ್ಲಿಯೇ ಬಂದ ವೀಣಾ ಯಲಬುರ್ಗಿಯವರ 'ಕೊನೆಯ ದಾರಿ' (ಅದೇ ಹೆಸರಿನ ಸಂಕಲನ) ಮೊದಲ ಪ್ರಯತ್ನ ಎನಿಸುತ್ತದೆ. (ಆಗ ಕಾನೂನಿನಲ್ಲಿ ಅವಕಾಶ ಇರಲಿಲ್ಲ.) ಇದರಲ್ಲಿ ಲೀಲಾ ಮಗುವನ್ನು ಪಡೆಯಲಿಕ್ಕಾಗಿ ಯಾರಯಾರದೋ ಸಹವಾಸ ಮಾಡುತ್ತಾಳೆ. ಮಗುವಿನ ಹಂಬಲಕ್ಕಿಂತ ಆಕೆಯ ಲೈಂಗಿಕ ಸ್ವಚ್ಛಂದತೆಯ ಮೇಲೆ ಹೆಚ್ಚಿನ ಒತ್ತು ಬಿದ್ದಿದೆ. ಜೊತೆಗೆ ಪುರುಷ ಉದ್ಯೋಗಿಗಳೆಲ್ಲ ಸ್ವೇಚ್ಛಾಚಾರಿಗಳೇನೋ ಎನ್ನುವ ಭಾವನೆಯನ್ನು ಕತೆ ಮೂಡಿಸುತ್ತದೆ. ಮಗುವನ್ನು ಪಡೆಯಲು ಆಕೆ ಕೊನೆಯಲ್ಲಿ ಆರಿಸಿಕೊಳ್ಳುವುದು ಅವಳ ತಂದೆಯ ಸ್ನೇಹಿತರಾದ ಶಂಕರೇಗೌಡರನ್ನು. ತನ್ನ ಕ್ರಿಯೆಯನ್ನು ಸಮರ್ಥಿಸಿಕೊಳ್ಳುವ ಲೀಲಾಳ ಆಲೋಚನೆಗಳೆಲ್ಲ ಏಮ್ಮುಖವಾದವು. ಸ್ವಕೇಂದ್ರಿತ ನೆಲೆಯಿಂದ ಹೊರಟವು. ತಾಯ್ತನದ ಪೂರ್ತಿಗಾಗಿ ಯಾರುಯಾರನ್ನೋ ಬೇಡಿಕೊಳ್ಳುವ ಅವಳ ವ್ಯಕ್ತಿತ್ವದ ಬಗೆಗೆ ಅನಾದರ ಮೂಡುತ್ತದೆ. ಯಾವ ಹೆಂಗಸೂ ತಾಯ್ತನದ ಪೂರೈಕೆಗಾಗಿ ಈ ಮಟ್ಟಕ್ಕೆ ಇಳಿಯಲಾರಳೆನಿಸುತ್ತದೆ.

"ಮಗು ಹೆರಲು ನಮಗೆ ಅದಿಕಾರವಿಲ್ಲ. ಕಾನೂನಿನ ಪ್ರಕಾರ ನಾವು ಗಂಡ ಹೆಂಡತಿ ಅಲ್ಲವಲ್ಲ" ಎನ್ನವ ಅವರದೇ 'ಹೀಗೊಂದು ಕತೆ'ಯ (ಬಿಡುಗಡೆ ಪು 16) ಆತನ ಹೇಳಿಕೆಗೆ ಆಕೆಯ ಉತ್ತರ "ಮಗು ಹೆರುವುದು ಹೆಂಗಸಿನ ಜನ್ಮಸಿದ್ಧ ಹಕ್ಕು. ಇದು ನನ್ನ ಮರ್ಜಿ, ನಿನ್ನ ಸಲಹೆ ಅನವಶ್ಯ" (ಅಲ್ಲೇ) ಮೇಲಿನ ಸಂಭಾಷಣೆ ಲೇಖಕಿಯ ನಿಲುವನ್ನು ವಾಚ್ಯವಾಗಿಯೇ ತಿಳಿಸುತ್ತದೆ. ಹತ್ತು ವರ್ಷಗಳ ಕಾಲ ಯಾವ ಬದ್ಧತೆಗಾಗಲಿ, ಭಾವುಕತೆಗಾಗಲಿ ಒಳಗಾಗದೆ ಒಟ್ಟಾಗಿ ಬದುಕಿದ ಅವರಿಬ್ಬರ ನಡುವೆ ಮಗುವಾಗುವ ಸನ್ನಿವೇಶ ಎದುರಾದಾಗ ಭಿನ್ನಾಭಿಪ್ರಾಯ ಮೂಡುತ್ತದೆ. ಇಲ್ಲಿ ಅವನ ಅಭಿಪ್ರಾಯಕ್ಕೆ ಯಾವುದೇ ಬೆಲೆ ಕೊಡದೆ ಆಕೆ ತಾಯಿಯಾಗುವ ತನ್ನ ನಿರ್ಧಾರಕ್ಕೆ ಅಂಟಿಕೊಂಡು ಮಗುವನ್ನು ಹೆರುತ್ತಾಳೆ. ವರ್ಗಮಾಡಿಸಿಕೊಂಡು ಅವಳಿಂದ ದೂರಹೋದ ಆತ ತನ್ನ ತಾಯಿ ಒಪ್ಪಿರುವುದರಿಂದ ಅವಳನ್ನು ಮದುವೆಯಾಗಲು ಸಿದ್ಧವಿರುವುದಾಗಿ ತಿಳಿಸುತ್ತಾನೆ. ಮಗುವನ್ನು ಹೆತ್ತ ಮೇಲೆ ಅವಳಿಗೆ ಅವನ ಸಂಬಂಧದ ಮುಂದುವರಿಕೆ ಬೇಡವೆನಿಸುತ್ತದೆ. ತಾಯ್ತನವೇ ಸ್ತ್ರೀ ಜೀವಿತದ ಸಾರ್ಥಕ್ಯ ಎನ್ನವುದಾಗಿ ಕತೆ ನಂಬುತ್ತದೆ. 'ತಾಯಿ ಮಗುವಿನ ಪ್ರೀತಿಯೇ ನಿಜವಾದ ಪ್ರೀತಿ, ಈ ಸಂಬಂಧದ ಮುಂದುವರಿಕೆ ಬೇಡವೆನಿಸುತ್ತದೆ. ತಾಯ್ತನವೇ ಸ್ತ್ರೀ ಜೀವಿತದ ಸಾರ್ಥಕ್ಯ ಎನ್ನುವುದಾಗಿ ಕತೆ ನಂಬುತ್ತದೆ. 'ತಾಯಿ ಮಗುವಿನ ಪ್ರೀತಿಯೇ ನಿಜವಾದ ಪ್ರೀತಿ, ಈ ಸಂಬಂಧವೊಂದೇ ನಿಜವಾದ ಸಂಬಂಧ" ಎನ್ನುವ ಆಕೆಯ ಆಲೋಚನೆಯಲ್ಲಿ ಸಾಂಪ್ರದಾಯಿಕ ಮನೋಭಾವದ ಛಾಯೆ ಕಾಣುತ್ತದೆ ನಿಜ. ಆದರೆ ಹೆಣ್ಣಿನ ವ್ಯಕ್ತಿತ್ವ ಪೂರ್ಣವಾಗುವುದು ತಾಯಿಯಾದಾಗ ಮಾತ್ರ ಎಂದು ಪ್ರತಿಪಾದಿಸುತ್ತ ಬಂದ ಸಮಾಜದ ಇಬ್ಬಂದಿತನವನ್ನು ಕತೆ ಪ್ರಶ್ನಿಸುತ್ತದೆ. ಆಕೆ ಅವಿವಾಹಿತಳಾಗಿದ್ದಲ್ಲಿ ಅವಳ ತಾಯ್ತನವನ್ನು ಒಪ್ಪುವುದಿಲ್ಲ. ವೈವಾಹಿಕ ಬದ್ಧತೆಯನ್ನು ಆ ಕ್ರಿಯೆಗೆ ಒಡ್ಡಿರುವ ಷರತ್ತನ್ನು ಕತೆ ನಿರಾಕರಿಸುತ್ತದೆ. 'ಇಷ್ಟೊಂದು ಸಂತೃಪ್ತಿಯ ಭಾವವನ್ನು ತನ್ನಲ್ಲಿ ಉಂಟುಮಾಡುತ್ತಿರುವ ಈ ಮಗುವಿನ ಹುಟ್ಟು ತಪ್ಪು ಹೇಗಾದೀತು? ಅಗ್ರಾಹ್ಯ ಹೇಗಾದೀತು ? ಪಾಪ ಹೇಗಾದೀತು' (ಪು 18) ಎನ್ನುವ ಅವಳ ಆಲೋಚನೆ ಲೇಖಕಿಯ ಒತ್ತು ಯಾವ ಕಡೆಗಿದೆ ಎನ್ನುವುದನ್ನು ಕಾಣಿಸುತ್ತದೆ. ತಾಯ್ತನದ ಬಗೆಗಿನ ಸಾಮಪ್ರದಾಯಿಕ ವೈಭವೀಕರಣದ ಪರಿಭಾಷೆಯನ್ನು ಆಲೋಚನಾ ಕ್ರಮವನ್ನೇ ಇಲ್ಲಿಯೂ ಬಳಸಲಾಗಿದೆ. ಆದರೆ ಸಂದರ್ಭ ಸನ್ನಿವೇಶಗಳು ತೀರ ಭಿನ್ನವಾಗಿವೆ.

CPMG/KA/BGS-8/2006-08 RNI No. 45577/88

Posted at Basavanagudi P.O. On the 25/29th of every Month

December - 2006

"Achala" 108, Skyline Surabhi,
14 - P , Vidyapeeta Road,
BSK III Stage,
Bangalore - 560 085

To :

Smt/Sri